RNI/ KAR / MUL/ 2009/30083/16/12/2009 RNP/KA/BGS/2126/2010-12 Dtd : 09/11/2010
Licensed to post Without Prepayment License no. WPP - 222Office of Posting : G.P.O.,
Bangalore - 560 001.Date of Publishing : 15th of every month



ಸೊಸಲೆಯಲ್ಲಿನ ಶ್ರೀ ವಿದ್ಯಾಪ್ರಸನ್ನತೀರ್ಥರ
ಬೃಂದಾವನ



ಶ್ರೀ ಪ್ರಸನ್ನ ಶೂರಮಾಧವತೀರ್ಥರ
ಬೃಂದಾಸವನ

NATIONAL INSTITUTE OF VEDIC SCIENCES
# 58, Raghavendra Colony, Chamarajpet, Bangalore - 560 018
Tele No: 080 -26914637, 26607741 www.nivsc.org
Joint Venture of Sri Sripadaraja Mutt and
Mantralayam Sri Raghavendra Swamy Mutt

Printed by H.B.Lakshminarayana Published by H.B.Lakshminarayana
on behalf of (or owned by) H.B.LAKSHMINARAYANA agent of
Sri Sripadaraja Mutt and Printed at Sri Sripadaraja Printers & Publisher,
#58, Raghavendra Colony, Chamarajapet, Bangalore - 18 and Published
at H.B.Lakshminarayana, C/o Sri Sripadarajamutt, # 58, Raghavendra Colony,
Chamarajapet, Bangalore - 18. Editor H.B.Lakshminarayana.



ಶ್ರೀ ವಿದ್ಯಾಪ್ರಸನ್ನತೀರ್ಥರ ಕೃತಿಗಳ ಅಧ್ಯಯನ
ಶ್ರೀ ಪ್ರಸನ್ನಶೂರಮಾಧವತೀರ್ಥರಿಗೆ ನಮನ

# ರಂಗವಿಠಲ

ಸಂಪುಟ-7, ಸಂಚಿಕೆ-5, ವಿಕೃತಿ ಪುಷ್ಯ January - 2011
RANGAVITTALA MONTHLY MAGAZINE VOLUME 07-ISSUE 5

ಶ್ರೀ ಶ್ರೀಪಾದರಾಜರ ಭಕ್ತಿ ಸಾಹಿತ್ಯ, ಕನ್ನಡ ದಾಸ ಸಾಹಿತ್ಯ, ದೇವರನಾಮ ಚಿಂತನೆ ಮತ್ತು ಜ್ಞಾನಸತ್ರಕ್ಕೆ ಮೀಸಲಾದ ಮಾಸಪತ್ರಿಕೆ

ಶ್ರೀ ಶ್ರೀಪಾದರಾಜ ಮಠ (ಮುಳಬಾಗಿಲು ಮಠ)

Rs.10/-

ಶ್ರೀ ಕೇಶವನಿಧಿತೀರ್ಥ ಶ್ರೀಪಾದಂಗಳವರ
ಆಶ್ರಾಮ ಹಾಗೂ ಪಿಠಾರೋಹಣದಂದು
ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರು
ಹಾಗೂ ಮಾಧವತೀರ್ಥ ಸಂಸ್ಥಾನದ
ಶ್ರೀ ಪ್ರಸನ್ನಶೂರಮಾಧವತೀರ್ಥರು
ನಡೆಸಿದ ಸಭೆ.





ನವೀಕರಣಗೊಂಡ ಹೊಸೂರಿನ
ಶ್ರೀ ಶ್ರೀಪಾದರಾಜ ಮಠ



ಶ್ರೀ ಪದ್ಮನಾಭತೀರ್ಥರ ಆರಾಧನೆಯಂದು
ಶ್ರೀ ಕೇಶವನಿಧಿತೀರ್ಥರು ಆರತಿ ನಡೆಸುತ್ತಿರುವುದು



ಶ್ರೀ ಪ್ರಸನ್ನಶೂರಮಾಧವತೀರ್ಥರು
ಹಾಗೂ ಕಿರಿಯ ಶ್ರೀಗಳಾದ
ಶ್ರೀ ವಿದ್ಯಾಸಾಗರ ಮಾಧವತೀರ್ಥರು
2009ರಲ್ಲಿ ಹರಿದ್ವಾರದ
ಪಾಲಿಮಾರು ಮಠದಲ್ಲಿ ಚಾತುರ್ಮಾಸ್ಯವನ್ನು
ಕೈಗೊಂಡಾಗ ತೆಗೆದ ಚಿತ್ರ



ಶ್ರೀ ಮೇದಾನಿಧಿತೀರ್ಥರ ಆರಾಧನೆಯಂದು
ಶ್ರೀ ಕೇಶವನಿಧಿತೀರ್ಥರು ಬೃಂದಾವನಕ್ಕೆ
ಅಭಿಷೇಕ ನಡೆಸುತ್ತಿರುವುದು



ಬಳ್ಳಾರಿಯ ಅಲಿಪುರದ ಹನುಮಂತಾಚಾರ್ಯರ
ಮನೆಯಲ್ಲಿ ಶ್ರೀಸುಯಮೀಂದ್ರರು 1932ರಲ್ಲಿ
ಪ್ರತಿಸ್ಥಾಪಿಸಿದ ಉಡುಪಿ ಕೃಷ್ಣ.

ಶ್ರೀ ವ್ಯಾಸರಾಜ ಮಠಾಧೀಶರಾದ
ಶ್ರೀ ವಿದ್ಯಾವಾಚಸ್ಪತಿತೀರ್ಥರ ದರ್ಬಾರಿನ
ಶ್ರೀ ಮಾಧವತೀರ್ಥ ಸಂಸ್ಥಾನದ
ಶ್ರೀ ಪ್ರಸನ್ನಶೂರಮಾಧವತೀರ್ಥರ ಉಪಸ್ಥಿತಿಯಲ್ಲಿ
ಮುಳಬಾಗಲು ಶ್ರೀ ಶ್ರೀಪಾದರಾಜ ಮಠದ
ಶ್ರೀ ವಿಜ್ಞಾನನಿಧಿತೀರ್ಥರು ಪುಸ್ತಕ ಬಿಡುಗಡೆ
ಮಾಡುತ್ತಿರುವುದು





ಬಳ್ಳಾರಿಗೆ ಶ್ರೀ ಕೇಶವನಿಧಿತೀರ್ಥರ ದಿಗ್ವಿಜಯ.

# ರಂಗವಿಠಲ

## ಮಾಸಪತ್ರಿಕೆ ಚಂದಾವಿವರ (Subscription)

| | |
|---|---|
| **ದಶವಾರ್ಷಿಕ ಚಂದಾ (Ten Years)** | **900-00** |
| **ಪಂಚವಾರ್ಷಿಕ ಚಂದಾ (Five Years)** | **450-00** |
| **ತ್ರೈವಾರ್ಷಿಕ ಚಂದಾ (Three Years)** | **275-00** |
| **ವಾರ್ಷಿಕ ಚಂದಾ (Annual)** | **100-00** |
| **ಬಿಡಿ ಪ್ರತಿ (Per Copy)** | **10-00** |

## ಜಾಹೀರಾತು ವಿವರ (Advertisement Tariff)

**With Colourful Photo's Size D 1/8 Multicolour Attractive Cover**

| | | | |
|---|---|---|---|
| Back Cover | 8000-00 | Half Page | 2500-00 |
| Inner Cover | 6000-00 | Full Page | 4000-00 |

## ಚಂದಾದಾರರಲ್ಲಿ ಮನವಿ

1) ಪತ್ರಿಕೆಗೆ ಹಣವನ್ನು ಕೊಡುವವರು ನಗದು/ಚೆಕ್ಕು/ಡಿಡಿ/ಎಂ.ಓ ಮೂಲಕ **ಸಂಪಾದಕರು, ರಂಗವಿಠಲ**ದ ಹೆಸರಿನಲ್ಲಿ ಕೊಡಬಹುದು. ಚಂದಾದಾರರ ವಿಳಾಸದಲ್ಲಿ ಬದಲಾವಣೆಯಾದ ಪಕ್ಷದಲ್ಲಿ ಕೂಡಲೇ ತಿಳಿಸಬೇಕೆಂದು ವಿನಂತಿ.

2) ನಿಮ್ಮ ವಿಳಾಸದ ಚೀಟಿಯ ಪಕ್ಕದಲ್ಲಿ (ಉದಾಹರಣೆಗೆ-oct-10) ಎಂದು ನಮೂದಿಸಲ್ಪಟ್ಟಿದ್ದಲ್ಲಿ ಆ ಸಂಚಿಕೆಯೊಂದಿಗೆ ಚಂದಾದಾರಿಕೆ ಮುಗಿಯುತ್ತದೆಂದು ತಿಳಿಯಬೇಕು. **ಪತ್ರಿಕೆಯನ್ನು ನವೀಕರಿಸುವಾಗ ತಪ್ಪದೇ ಚಂದಾದಾರರ ಸಂಖ್ಯೆಯನ್ನು ನಮೂದಿಸಬೇಕಾಗಿ ವಿನಂತಿ.**

***3) Renew your subscription immediately. Cheque/DD may be drawn in favour of Editor, Rangavittala, Bangalore. Quote your Subscription Number while corresponding.***

*** Please cirulate this magazine among friends & relatives.**
*** We seek your support for subscription promotion.**
*** You can also contribute Advertisement.**
*** DD/MO/Cheque may please be sent to the following Address:**

ನಮ್ಮ ವಿಳಾಸ: ***EDITOR, RANGAVITTALA***
***Sri Sripadaraja Mutt, No. 58, Raghavendra Colony, Chamarajpet, Bangalore-18. Phone : 26914637, 26914571***



# ರಂಗವಿಠಲ

**ಶ್ರೀ ಶ್ರೀಪಾದರಾಜರ ಭಕ್ತಿಸಾಹಿತ್ಯ, ದಾಸಸಾಹಿತ್ಯ, ದೇವರನಾಮ, ಧರ್ಮಚಿಂತನೆ ಮತ್ತು ಜ್ಞಾನಸತ್ರಕ್ಕೆ ಮೀಸಲಾದ ಮಾಸಪತ್ರಿಕೆ**

**ವಿಕೃತಿ, ಪುಷ್ಯ, ಜನವರಿ 2011, January-2010**

(ಜಿಲ್ಲಾದಂಡಾಧಿಕಾರಿಗಳ ಮತ್ತು RNI ಅಧಿಕೃತ ಅನುಮೋದನೆ ಪಡೆದಿರುತ್ತದೆ.

**(ಸಂಪುಟ 7 ಸಂಚಿಕೆ 5)**

ಪತ್ರಿಕೆಯು ಪ್ರತಿ ತಿಂಗಳು 15 ರಂದು ಪ್ರಕಟವಾಗುತ್ತದೆ.)

## ಪರಿವಿಡಿ

1) ವಿಜ್ಞಾನ ವಾಣಿ 2
2) ಅನುಗ್ರಹ ಸಂದೇಶ 3
3) ಸಂಪಾದಕೀಯ 4
4) ಕಥೆಗಳು 5
5) ಶ್ರೀ ಪ್ರಸನ್ನಶೂರ ಮಾಧವತೀರ್ಥರಿಗೆ ನಮನ 9
6) ಶ್ರೀ ವಿದ್ಯಾಪ್ರಸನ್ನತೀರ್ಥರ ಕೃತಿಗಳ ಬಗ್ಗೆ 14

Publisher : **Sri Sripadaraja Mutt**
Mulbagal, Kolar, Phone: **08159-290839**

**Address: Postal / Courier / Email**

**Sri Sripadaraja Mutt**
No. 58, Raghavendra Colony, Chamarajpet,
Bangalore-560 018. Phone : (080) 26914637, 26914571
Website: Sripadarajamutt.org
Email: rangavittala.sripada@gmail.com



## ರಥಸ್ಥಂ ಕೇಶವಂ ದೃಷ್ಟ್ವಾಪುರ್ನಜನ್ಮನವಿದ್ಯತೇ

**ಡೋಲಾಯಮಾನಂ ಗೋವಿಂದಂ-ಮಂಚಸ್ಥಂ ಮಧುಸೂದನಂ।**

ಯತಿಕುಲ ಚಕ್ರವರ್ತಿ ಎಂಬ ಬಿರುದಾಂಕಿತರು, ಅಪರೋಕ್ಷಜ್ಞಾನಿಗಳು, ಕೀರ್ತಿಶೇಷರು ಆದ ಶ್ರೀ 108 ಶ್ರೀ ವಿಜ್ಞಾನನಿಧಿ ತೀರ್ಥ ಶ್ರೀಪಾದಂಗಳವರು ಅನೇಕ ಬಾರಿ ಒಂದಲ್ಲ ಒಂದು ವಿಷಯದ ಬಗ್ಗೆ ತಮ್ಮದೇ ಆದ ಶೈಲಿಯಲ್ಲಿ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ನಿರೂಪಿಸುತ್ತಿದ್ದರು. ಅಂತಹ ವಿಷಯಗಳ ಪೈಕಿ ಈ ಸಾಲಿನ ಅರ್ಥವಿವರಣೆಯೂ ಒಂದು. **ರಥಸ್ಥಂ ಕೇಶವಂ ದೃಷ್ಟ್ವಾಪುರ್ನಜನ್ಮನವಿದ್ಯತೇ** ಎಂಬುದರ ಅರ್ಥವೇನೆಂದರೆ, ರಥದಲ್ಲಿ ಕುಳಿತಿರುವ ರಮಾ ಬ್ರಹ್ಮಾದಿಗಳ ನಿಯಾಮಕನಾದ ಶ್ರೀಹರಿಯದರ್ಶನ ಮಾತ್ರದಿಂದಲೇ ಸಂಸಾರನಿವೃತ್ತಿಯಾಗಿ ಮತ್ತೆ ಹುಟ್ಟುಸಾವುಗಳು ಇರುವುದಿಲ್ಲ.

ಶ್ರೀಗಳವರ ಅಭಿಪ್ರಾಯವೇಂದರೆ, **ಏಷಹಿ ದೇಹರಥಃ** ಎಂಬ ಉಕ್ತಿಯಂತೆ, ಈ ದೇಹವೇ ರಥಸ್ಥಾನಪನ್ನವಾಗಿದೆ. ಈ ದೇಹಾಖ್ಯ ರಥದಲ್ಲಿ ಶ್ರೀಕೇಶವನು ಸನ್ನಿಹಿತನಾಗಿದ್ದಾನೆ. ಅಂತಹ ಪರಮಾತ್ಮನನ್ನು ಶ್ರೀಮದಾಚಾರ್ಯರ ಸರ್ವಮೂಲ ಗ್ರಂಥಗಳ ಚೌಕಟ್ಟಿನಲ್ಲಿ ಗುರುಮುಖೇನ ಅರಿತು ಅಂತರಂಗದಲ್ಲಿ ಶ್ರೀಕೇಶವನನ್ನು ಕಾಣಬೇಕೆಂಬುದೇ ಅವರ ಆಶಯ. ಈ ವಿಷಯವನ್ನು ನೆನೆದಾಗಲೆಲ್ಲ ಶ್ರೀಗಳವರು **ಅಂತರಂಗದಲ್ಲಿ ಹರಿಯಕಾಣದವ ಹುಟ್ಟು ಕುರುಡನೋ** ಎಂಬ ದೇವರನಾಮವನ್ನು ಮತ್ತು ಧ್ರುವನನ್ನು ಸ್ಮರಿಸುತ್ತಿದ್ದರು.

**ಹೆಬ್ಬಣಿ ಜಿ. ರಾಮಚಂದ್ರ**

**ನಂ. 16, ರಾಮ್‌ರಾವ್ ಲೇಔಟ್, ಬಿ.ಎಸ್.ಕೆ. 3ನೇ ಹಂತ ಬೆಂಗಳೂರು-85**

## ಶ್ರೀ ವಿಕೃತಿನಾಮ ಸಂವತ್ಸರ, ಮಾಘಮಾಸ

**´ŸÊÄ&2011**

**03.** Êá«Ì®ÊÃÝñÝÃí».

**05. ÎàÓíPÐì|£à¥ìÃ ±â|Â.©®.** (Îà®WÃ).

08. **Îà ÎàÊÆ»£à¥ìÃ** ±â|Â©® Jv±Ú.

**10.** Ã¥Ó±Ëáà, AÃáOãà¨Áàà, Ó±ÝPì±|ìÓÝ®.

**11.** ¼àÐÝÐËáà, ¼àÐñ±ì|.

**12.** ÎàÊá«Ì®ÊËá,ÎàÊá«ÝÌaÝ¿áìÃáŸ¨ÄPÝÍÊá ±ÊàÎÔ¨©®.

**14. ÓÊàìÐÝÊáàPÝ¨Î (g¿Þ)**

**15.** ±ÝÃO, ¼àÊá¨ÝÌ¨Î, £ÇãàñÊ£,

16. ±¨ãàÐ, AíñÂ±âÐÄ~, PÇÝ©.

**18.** »ÃñÖá~Êá, ÊÝÂÓ±ä~ìÊÞ, ÊÝÂÓ±ähÝ, ÊÞZÓÝ®ÓÊÞ², **ÎàþÝ®¯—£à¥ìÃ ±â|Â©®.** (ÎàÃíW±o|).

**24. ÎàWá|¯—£à¥ìÃ ±â|Â©®.** (ñÝ¿áãÃá), ±äÊàì¨áÂÍÝ¨.

**25.** AÐPÝÍÝ¨.

**26.** A®ÌÐPÂÍÝ¨.

**28. ÓÊàìÐÝÊáàPÝ¨Îà (Ëg¿Þ),**

**ÊÞa…ì 2011**

**01.** ±ÝÃO.

**02.** ±¨ãàÐ. ÊáÖÝÎÊÃÝ£.Ãá¨ÝíñÌ¿ÞìËá, ÓíPÐì|Êáã£ì ¨ÃáÍ®.

**04.** AÊÞÊÝÓÂ ¨Íì, **]àPÝíñ£à¥ìÃ,±â|Â.©®.**(®íWÈ).

## ಪುಷ್ಯ ಮಾಸದಲ್ಲಿ ಬರುವ ದಾಸರುಗಳ ಆರಾಧನೆಯ ವಿವರ

**ಹರಪ್ಪನಹಳ್ಳಿ ಭೀಮವ್ವ 1823-1903**

**ಹೆಸರು:** ಭೀಮವ್ವ, **ಅಂಕಿತ:** ಭೀಮೇಶ ಕೃಷ್ಣ

**ಕೃತಿಗಳು:** 143 ಕೀರ್ತನೆಗಳು, 6 ದೀರ್ಘಕೃತಿಗಳು, **ಕಾರ್ಯಕ್ಷೇತ್ರ:** ಹರಪ್ಪನಹಳ್ಳಿ,

**ಪುಣ್ಯ ದಿನ:** ಪುಷ್ಯ ಶುದ್ಧ ತ್ರಯೋದಶಿ.

**ಅಭಿನವ ಪ್ರಾಣೇಶ ವಿಠ್ಠಲ ದಾಸರು 1903-1978**

**ಹೆಸರು:** ಹನುಮಂತರಾವು, **ಅಂಕಿತ:** ಅಭಿನವ ಪ್ರಾಣೇಶ ವಿಠ್ಠಲ

**ಕೃತಿಗಳು:** 9 ಕೀರ್ತನೆಗಳು, 22 ಸುಳಾದಿಗಳು , **ಕಾರ್ಯಕ್ಷೇತ್ರ:** ಲಿಂಗಸುಗೂರು,

**ಪುಣ್ಯದಿನ:** ಪುಷ್ಯ ಬಹುಳ ಸಪ್ತಮಿ.

**ಶ್ರೀ ಗೋಪಾಲದಾಸರು 1721-1763**

**ಹೆಸರು:** ಭಾಗಣ್ಣ, **ಅಂಕಿತ:** ಗೋಪಾಲವಿಠ್ಠಲ,

**ಕೃತಿಗಳು:** 96 ಕೀರ್ತನೆಗಳು, 21 ಉಗಾಭೋಗಗಳು, 70 ಸುಳಾದಿಗಳು,

**ಕಾರ್ಯಕ್ಷೇತ್ರ:** ಉತ್ತನೂರು, **ಆರಾಧನೆ ದಿನ:** ಪುಷ್ಯ ಬಹುಳ ಅಷ್ಟಮಿ.

**ನಡಪುರಿಹನುಮ 1829-1904**

**ಹೆಸರು:** ರಾಘವಾರ್ಯ ಒಡೆಯರು, **ಅಂಕಿತ:** ನಡಪುರಿ ಹನುಮ,

**ಕೃತಿಗಳು:** 13 ಕೀರ್ತನೆಗಳು, **ಕಾರ್ಯಕ್ಷೇತ್ರ:** ನಡುವಲಕೊಪ್ಪ

**ಪುಣ್ಯ ದಿನ:** ಪುಷ್ಯ ಬಹುಳ ಏಕಾದಶಿ.

**ಶ್ರೀ ಪುರಂದರದಾಸರು 1480-1564**

**ಹೆಸರು:** ಶೀನಪ್ಪನಾಯಕ, **ಅಂಕಿತ:** ಪುರಂದರ ವಿಠ್ಠಲ,

**ಕೃತಿಗಳು:** 703 ಕೀರ್ತನೆಗಳು, 261 ಉಗಾಭೋಗಗಳು, 72 ಸುಳಾದಿಗಳು,

**ಕಾರ್ಯಕ್ಷೇತ್ರ:** ಹಂಪಿ, **ಆರಾಧನೆ ದಿನ:** ಪುಷ್ಯ ಅಮಾವಾಸ್ಯ..

**ಶ್ರೀ ಸುಂದರ ವಿಠ್ಠಲದಾಸರು 1893-1969**

**ಹೆಸರು:** ಗೋರೆಬಾಳು ಹನುಮಂತರಾವು, **ಅಂಕಿತ:** ಸುಂದರವಿಠ್ಠಲ,

**ಕೃತಿಗಳು:** 5 ಕೀರ್ತನೆಗಳು, 5 ದೀರ್ಘಕೃತಿಗಳು, 1 ಸುಳಾದಿ,

**ಪುಣ್ಯ ದಿನ:** ಪುಷ್ಯ ಬಹುಳ ದ್ವಾದಶಿ.



## ಸಂದೇಶ

**ಗಾನವು ಕೃತಿಯುಗದಿ** ಎಂಬ ಚಿಂತನೆಯನ್ನು **ಶ್ರೀ ಶ್ರೀಪಾದರಾಜರು** ನೀಡಿದರೆ ಶ್ರೀವಿದ್ಯಾಪ್ರಸನ್ನತೀರ್ಥರು **ಗಾನಕೆ ಸುಲಭರಾಮ ನಾಮವು** ಎಂದು ಹೇಳಿದ್ದರಿಂದ ಶ್ರೀ ಶ್ರೀಪಾದರಾಜರು ಮತ್ತು ವ್ಯಾಸರಾಜರಲ್ಲಿಯ ಅನ್ಯೋನತೆಯನ್ನು ಮತ್ತೊಮ್ಮೆ ನೆನೆದಂತಾಗುತ್ತದೆ.

ವಿದ್ಯಾಪ್ರಸನ್ನರು ತಮ್ಮ ಪೂರ್ವಾಶ್ರಮದಲ್ಲಿ ಲೌಕಿಕರಾಗಿದ್ದು ಆಶ್ರಮಾನಂತರ ತಮ್ಮಲ್ಲಿ ಹುದುಗಿದ್ದ ತತ್ವ ಚಿಂತನೆಯನ್ನು ವ್ಯಾಸರಾಜರ ಪರಂಪರೆಗೆ ಸರಿಹೊಂದುವಂತೆ ದಾಸಸಾಹಿತ್ಯ ಕೃತಿಗಳ ಮೂಲಕ ಹೊರಚೆಲ್ಲಿದ್ದಾರೆ.

ಇವರ ಕೃತಿಗಳ ಅಧ್ಯಯನವು ಬಹು ಸುಲಭವಾಗಿ ತೋರಿದರೂ ಅವುಗಳು ಪ್ರಮೇಯ ಭರಿತವಾಗಿರುತ್ತವೆ. **ರಂಗವಿಠಲ** ಇವರ ಕೃತಿಗಳ ಅಧ್ಯಯನವನ್ನು ನಡೆಸಿದ್ದು ಸಂತೋಷದ ಸಂಗತಿಯಾಗಿದೆ. ಇದರಂತೆಯೇ ಇನ್ನೂ ಮಿಕ್ಕ ಯತಿ ಶ್ರೇಷ್ಠರುಗಳ ಕೃತಿ ಅಧ್ಯಯನವನ್ನು ನಡೆಸಿದಲ್ಲಿ ಯುವ ಜನತೆಗೆ ಮಹದುಪಕಾರವಾಗುತ್ತದೆ.

ನಮ್ಮ ಗುರುಗಳಾದ ಶ್ರೀವಿಜ್ಞಾನನಿಧಿತೀರ್ಥರು ಆವಿಷ್ಕಾರವನ್ನು (ಸಂಶೋಧನೆಯನ್ನು) ಬಹಳವಾಗಿ ಮೆಚ್ಚುತ್ತಿದ್ದರು. ಅವರ ಆಶಯದಂತೆ **ರಂಗವಿಠಲ**ವು ಹೆಚ್ಚು ಸಂಶೋಧನಾತ್ಮಕ ಬರಹಗಳನ್ನು ನೀಡಲೆಂದು ಮಾಡುವ

**ನಾರಾಯಣ ಸ್ಮರಣೆಗಳು**

**ಶ್ರೀ ಶ್ರೀ ಕೇಶವನಿಧಿತೀರ್ಥ ಶ್ರೀಪಾದಂಗಳವರು**

## ಸಂಪಾದಕೀಯ

**ಹನುಮನ ಮತದಲಿ ಅನುಮಾನ ಬೇಡವೊ**
**ಮನಮುಟ್ಟಿ ಭಜಿಸಲೊ ಎಲೆ ಮನವೆ**

ಎಂಬ ಕೃತಿಯ ಸಾಲುಗಳು ಶ್ರೀ **ವಿದ್ಯಾಪ್ರಸನ್ನತೀರ್ಥ**ರಿಂದ ರಚಿಸಲ್ಪಟ್ಟಿವೆ. 20ನೇ ಶತಮಾನದ ಧೀಮಂತ ಯತೀಂದ್ರರು ಇವರು. ದಾಸಸಾಹಿತ್ಯವು ಪ್ರಾಚೀನರ ಸೊತ್ತಾಗಿಯೇ ಉಳಿಯಬಾರದೆಂದು ಇವರ ಜನ್ಮವಾಯಿತೇನೋ ಎಂಬಂತೆ ಕೃತಿಗಳನ್ನು ರಚಿಸಿ, ಭಕ್ತ ಸಮೂಹವನ್ನು ಸಂತೋಷಪಡಿಸಿದ್ದಾರೆ.

ಶ್ರೀ ವಿದ್ಯಾಪ್ರಸನ್ನತೀರ್ಥರ ಕೃತಿಗಳು ಧಾರ್ಮಿಕ ವಿಷಯಗಳಿಗೆ ಮೀಸಲಾಗದೆ, ಸಾಮಾಜಿಕ, ಲೋಕನೀತಿ, ತಾರತಮ್ಯ ಭಜನೆ, ಕಥಾನಾತ್ಮಕ ಹಾಡುಗಳು, ಸಂಪ್ರದಾಯದ ಹಾಡು ಹಾಗೂ ವಿಶೇಷ ಸಂದರ್ಭಕ್ಕಾಗಿ ಕೇಲವು ಕೃತಿಗಳನ್ನು ರಚಿಸಿದ್ದಾರೆ. ನವೀನ ಯುಗದ ಲೌಕಿಕ ವಿಷಯಗಳ ದೃಷ್ಟಾಂತದೊಂದಿಗೆ ತತ್ವಚಿಂತನೆಯನ್ನು ಸೇರಿಸಿ ಕೃತಿ ರಚಿಸಿರುವುದು ಒಂದು ಹೊಸ ಮಾದರಿಯಾಗಿವೆ.

ಇಂತಹ ಮಹನೀಯರನ್ನು ಸ್ಮರಿಸಿ ಅವರು ನೀಡಿದ ಸಂದೇಶವನ್ನು ಸಜ್ಜನರೆಲ್ಲರೂ ಪಾಲಿಸುವಂತಾದರೆ ಅವರಿಗೆ ನೀಡಿದ ಗೌರವವಾಗುತ್ತದೆ. ಈ ದಿಶೆಯಲ್ಲಿ **ರಂಗವಿಠಲ** ಇಂತಹ ಮಹಿಮೋಪೇತರ ಕೃತಿಗಳನ್ನು ಪ್ರಚುರಪಡಿಸುತ್ತಿರುವುದು ಓದುಗರು ಮತ್ತು ಲೇಖಕರು ನೀಡಿದ ಪ್ರೋತ್ಸಹದಿಂದಲೇ ಅಂದರೆ ತಪ್ಪಾಗಲಾರದು.

ಮಾಧವತೀರ್ಥ ಸಂಸ್ಥಾನದ ಹಿರಿಯಯತಿಗಳಾದ **ಶ್ರೀ 108 ಶ್ರೀಪ್ರಸನ್ನಶೂರಮಾಧವತೀರ್ಥರು** ಪ್ರಖ್ಯಾತರಾದ ಪತ್ರಿಕ್ಯೋದಮಿಗಳಾಗಿ ನಂತರ ಸನ್ಯಾಸವನ್ನು ಪಡೆದು ಮಾಧವತೀರ್ಥ ಸಂಸ್ಥಾನವನ್ನು ಅಭಿವೃದ್ಧಿಪಡಿಸಿದರು. ಉತ್ತಮ ದಾಸಸಾಹಿತ್ಯ ಕೃತಿ ರಚನೆಯಲ್ಲಿ ಚತುರರಾದ **ಶ್ರೀವಿದ್ಯಾಸಾಗರ ಮಾಧವತೀರ್ಥ**ರನ್ನು ತಮ್ಮ ಉತ್ತರಾಧಿಕಾರಿಯನ್ನಾಗಿ ನಮಗೆ ನೀಡಿ ಅವರು ದೈವಾಧೀನರಾದದ್ದು ಶಿಷ್ಯ ವಾತ್ಸಲ್ಯದ್ಯೋತಕವಾಗಿದೆ.

**ಸಂಪಾದಕ, ರಂಗವಿಠಲ**



# Required Research Fellows:
## ಸಂಶೋಧಕರು ಬೇಕಾಗಿದ್ದಾರೆ

Wanted Junior and Senior Research fellows to carry out Research work in various disciplines of Ancient Indian / Vedic Science.

The Candidate should have essentially

1. M.A (Sanskrit) with interest in Science /BE/B.Sc/ Diploma / with knowledge of Sanskrit disciplines.

Preferred: Strong aptitude/ passion for Vedic Science research Opportunity exists for serious researchers to pursue for M.Phil/ Ph.D studies along with project work.

For further details they may contact Registrar, NIVS. Candidates can apply on paper with details of age/ qualification and experience, if any along with a write up in 500 words on how they qualify for this post.

**Apply to : The Secretary,**
**National Institute of Vedic Scienes (Regd.)**
**No.58, Raghavendra Colony, Chamarajapet,**
**Bangalore - 500 018. Phone No. 26607741/ 26914637**
**E-Mail: nivs_india01@gmail.com**

| | |
|---|---|
| ಸಂಜೆ 5 ರಿಂದ 6 | **ಯತಿಧರ್ಮ** ಡಾ॥ಚತುರ್ವೇದಿ ವೇದವ್ಯಾಸಾಚಾರ್ |
| 6 ರಿಂದ 7 | **ಯತಿಪ್ರಣವ ಕಲ್ಪ** ರಾಮವಿಠಲಾಚಾರ್ |

## 5-2-2011

| | |
|---|---|
| ಬೆಳಿಗ್ಗೆ 7-30 ರಿಂದ 8-30 | ಶ್ರೀ ಶ್ರೀವಿಜ್ಞಾನನಿಧಿತೀರ್ಥರ ದರುಶನ |
| 8-30 ರ ನಂತರ | ಪ್ರತಿಷ್ಠಾ ಕಾರ್ಯಕ್ರಮ |
| 10 ರಿಂದ 12 | **ಬೃಂದಾವನತತ್ವ** ವಟ್ಟಂಗಾಡು ಹಯಗ್ರೀವಾಚಾರ್ಯರು ಪಿ.ಎಸ್. ಶೇಷಗಿರಿ ಆಚಾರ್ಯರು |
| 8-30 ರಿಂದ 12 | 108ದಂಪತಿಗಳಿಂದ ಪ್ರತ್ಯೇಕ ಪ್ರತ್ಯೇಕ ಪವಮಾನ ಹೋಮಗಳು. |

## 12-2-2011 ಶ್ರೀಮನ್ ಮಧ್ವನವಮಿ ಪ್ರಯುಕ್ತ ಶ್ರೀಸುಮದ್ವವಿಜಯ ಹೋಮ ಪವಮಾನ ನವಗ್ರಹ ಇನ್ನಿತರಹೋಮಗಳು

| | |
|---|---|
| ಮದ್ಯಾಹ್ನ 3-30ಕ್ಕೆ | ಪ್ರತಿಭಾ ಪುರಸ್ಕೃತರಿಗೆ ಸನ್ಮಾನ |

## ಜನವರಿ 2011ರ ಸಂಚಿಕೆಯಲ್ಲಿ

**ಶ್ರೀ ಹರಿದಾಸರು ಕಂಡ ಮಧ್ವಾಚಾರ್ಯರು** ಎಂಬ ವಿಷಯದ ಬಗ್ಗೆ ಅಧ್ಯಯನ ನಡೆಸಲು ನಿಶ್ಚಯಿಸಲಾಗಿದೆ. ಫೆಬ್ರವರಿ 2011ರ ಸಂಚಿಕೆಯಲ್ಲಿ ರಂಗವಿಠಲ ನೀಡಬಯಸುತ್ತದೆ. ತಮ್ಮ ಲೇಖನಗಳಲ್ಲಿ ಆಧಾರಿತ ಕೃತಿಗಳನ್ನು ಆಯ್ದುಕೊಂಡಿರುವ ಗ್ರಂಥದ ಹೆಸರು, ಪುಟ, ಕೀರ್ತನೆಗಳ ಸಂಖ್ಯೆಯನ್ನು ಹಾಗೂ ವಿಮರ್ಶಿಸಿರುವ ಕೃತಿ ಮತ್ತು ಅದರ ಲೇಖಕರ ಬಗ್ಗೆ ಮಾಹಿತಿಯನ್ನು ನೀಡಬೇಕಾಗಿ ಕೋರಿದೆ.

ಓದುಗರು ತಮ್ಮ ಲೇಖನಗಳನ್ನು **ಜನವರಿ 30, 2011**ರೊಳಗೆ ಕಳುಹಿಸಬೇಕೆಂದು ಕೋರಿದೆ. ತಮ್ಮ ಲೇಖನಗಳು ಶುದ್ಧಕೃತಿ ಮತ್ತು ತತ್ಸಂಬಂಧವಾದ ಪ್ರಮಾಣಗಳ ಪುರಸ್ಸರವಾಗಿದ್ದರೆ ಮಾತ್ರ ಸ್ವೀಕರಿಸಲಾಗುವುದು. ಪ್ರಮಾಣಗಳ ಆಧಾರಿತ ಗ್ರಂಥ ಮತ್ತು ವಿಷಯದ ಪುಟ ಸಂಖ್ಯೆಯನ್ನು ನಮೂದಿಸಲು ಕೋರಿದೆ.

**ಮಾರ್ಚ್ 2011**ರ ರಂಗವಿಠಲ ಸಂಚಿಕೆಯಲ್ಲಿ **ವ್ಯಾಸವಿಠ್ಠಲ (ಕಲ್ಲೂರು ಸುಬ್ಬಣ್ಣಾಚಾರ್ಯರು) ಜೀವನ ಹಾಗೂ ಕೃತಿಗಳ** ಬಗ್ಗೆ ಅಧ್ಯಯನ ನಡೆಸಲು ನಿಶ್ಚಯಿಸಲಾಗಿದೆ. ಇದರ ಬಗ್ಗೆ ಲೇಖಕರು ದಯಮಾಡಿ ತಮ್ಮ ಲೇಖನಗಳನ್ನು **ಫೆಬ್ರವರಿ 15, 2011** ರೊಳಗೆ ಕಳುಹಿಸಬೇಕೆಂದು ಕೋರಿದೆ.

**ಸಂಪಾದಕ, ರಂಗವಿಠಲ.**



**ಶ್ರೀವಿದ್ಯಾಪ್ರಸನ್ನತೀರ್ಥರು ಹೇಳಿದ ಕಥೆಗಳು**

## ಆನಕ ದುಂದುಭಿಕುವರ

**ದುಂದುಭಿ ನಾದವು ಕೇಳುತಿದೆ ಬಲು**
**ಮಂದಿಯ ತಂಡವು ಹೋಗುತಿದೆ**
**ಕಂದನ ರೂಪದಿ ಬಂದಿಹ ಆನಕ**
**ದುಂದುಭಿ ಕುವರನ ಸಂಭ್ರಮ ನೋಡಲು**

**-ಸಮಗ್ರ ದಾಸಸಾಹಿತ್ಯ ಸಂಪುಟ-28 (ಪುಟ-186)**

ಪ್ರಸನ್ನತೀರ್ಥರು ಕೃಷ್ಣನನ್ನು ಮನಃ ಪೂರಕವಾಗಿ ಕೊಂಡಾಡುವ ಕೀರ್ತನೆ ಇದು. ಕೃಷ್ಣನ ತಂದೆ **ವಸುದೇವ**ನಿಗೆ **ಆನಕದುಂದುಭಿ** ಎಂಬ ಹೆಸರಿತ್ತು. ಆನಕದುಂದುಭಿ ಎಂಬ ಹೆಸರನ್ನು ವಸುದೇವ ಪಡೆದ ವಿಷಯವನ್ನು ಕಥಾರೂಪಕವಾಗಿ ಈ ಸಾಲುಗಳಲ್ಲಿ ವರ್ಣಿಸಿದ್ದಾರೆ.

ವಸುದೇವನು ಯದುವಂಶ ರಾಜನಾದ **ಶೂರಸೇನನ** ಮಗ. **ಕುಂತಿ**ಯ ಒಡಹುಟ್ಟಿದವನು. ಈತನ ಜನನ ಕಾಲದಲ್ಲಿ ದೇವತೆಗಳು ಆನಕ(ತಮಟೆ) ದುಂದುಂಭಿ (ನಗಾರಿ)ಮುಂತಾದ ವಾದ್ಯಗಳಿಂದ ವಸುದೇವನನ್ನು ಬರಮಾಡಿಕೊಂಡರು. ಈ ವಾದ್ಯಘೋಷದ ಪ್ರಯುಕ್ತವಾಗಿ ವಸುದೇವನನ್ನು ಆನಕದುಂದುಭಿ ಎಂಬ ನಾಮಾಂತರದಿಂದ ಕರೆಯುತ್ತಿದ್ದರು. ಈತನಿಗೆ 14 ಮಂದಿ ಪತ್ನಿಯರು. ಇವರಲ್ಲಿ ದೇವಕನ ಪುತ್ರಿಯಾದ ದೇವಕಿಯೂ ಒಬ್ಬಳು. ದೇವಕಿ ವಸುದೇವರನ್ನು ಕಂಸನು ಕಾರಾಗೃಹದಲ್ಲಿ ಬಂಧಿಸಿದಾಗ ಕೃಷ್ಣನ ಜನನವಾಯಿತು.

ಕೃಷ್ಣನನ್ನು ಆನಕದುಂದುಭಿಕುವರನೆಂದು ಸಂಭೋಧಿಸಿದ್ದೂ ಉಂಟು.

ಭಾಗವತದ ನವಮಸ್ಕಂದದ ಈ ಕಥಾ ಭಾಗವನ್ನು ದಾಸರು ಕೃಷ್ಣನ ಜನನದ ವಿಷಯದಲ್ಲಿ ತಿಳಿಸಿರುವುದು ಸಂದರ್ಭೋಚಿತವಾಗಿದೆ.

**ಶ್ರೀ ಶ್ರೀಕೇಶವನಿಧಿತೀರ್ಥರು**

ಶ್ರೀವಿದ್ಯಾಪ್ರಸನ್ನತೀರ್ಥರು
ಹೇಳಿದ ಕಥೆಗಳು

## ಮಥುರೆಯಿಂದ - ಗೋಕುಲಕ್ಕೆ

ಬಲ್ಲೆನೋ ಚಲ್ಲಾಟವ ।

ಸಲ್ಲದೋ ಎನ್ನಲಿದೆಲ್ಲವು ।

ದುರುಳ ಕಂಸನಿಗಂಜಿ ಇರುಳು ಸಮಯದಲಿ
ತೆರಳಿದ ನಿನ್ನಯ ತಿರುಳುಗಳನು ॥

-ಸಮಗ್ರ ದಾಸಸಾಹಿತ್ಯ ಸಂಪುಟ-28 (ಪುಟ-186)

**ಕೃಷ್ಣಾ**ವತಾರದ ಕಥೆಯನ್ನು ತಿಳಿಸುವುದೆಂದರೆ ಶ್ರೀ **ಪ್ರಸನ್ನತೀರ್ಥ**ರಿಗೆ ಹರ್ಷದಾಯಕವು, **ಬಲ್ಲೆನು ಚೆಲ್ಲಾಟ**ವೆಂಬ ಈ ಕೀರ್ತನೆಯ ಮೂಲಕ ಕೃಷ್ಣನು ಬಾಲ್ಯದಲ್ಲಿ ನಡೆಸಿದ ಲೀಲೆಗಳನ್ನು ಕಥಾರೂಪಕವಾಗಿ ತಿಳಿಸಿದ್ದಾರೆ.

ಮಥುರೆಯ ಕಾರಾಗೃಹದಿಂದ ಬೃಂದಾವನಕ್ಕೆ ತೆರಳಿದ ವಿಷಯವನ್ನು ಆಣಕರೂಪದಿಂದ ಕಥೆಯಾಗಿ ಬಣ್ಣಿಸಿದ್ದಾರೆ.

**ಕಂಸನು ವಸುದೇವ ದೇವಕಿಯ**ರನ್ನು ಬಂಧಿಸಿರುತ್ತಾನೆ. ಅವರಲ್ಲಿ ಜನಿಸಿದ ಎಂಟನೆಯ ಶಿಶುವು ಕಂಸನಿಗೆ ಶತ್ರುವೆಂದು ತಿಳಿದು ವಸುದೇವ ದೇವಕಿಯರ ಎಲ್ಲ ಶಿಶುವನ್ನು ಸಂಹರಿಸುತ್ತಾನೆ. ಎಂಟನೆಯ ಶಿಶುವಾದ ಕೃಷ್ಣನು ಜನಿಸಿದಾಗ ನಡುರಾತ್ರಿಯಾಗಿರುತ್ತದೆ. ವಸುದೇವ-ದೇವಕಿಯರಲ್ಲಿ ಕಂಸನ ಬಗ್ಗೆ ಇದ್ದ ಭಯವನ್ನು ಕಂಡು, ಶ್ರೀಕೃಷ್ಣನೇ ತನ್ನನ್ನು ಗೋಕುಲಕ್ಕೆ ಕರೆದೊಯ್ಯಲು ಸೂಚಿಸುತ್ತಾನೆ. ಕೃಷ್ಣನ ಆಜ್ಞೆಯಂತೆ ವಸುದೇವನು ಯಮುನಾ ನದಿಯನ್ನು ದಾಟಿ ಗೋಕುಲದಲ್ಲಿ **ಯಶೋದೆ**ಯ ಮಡಿಲಲ್ಲಿ ಬಿಟ್ಟು ಬರುತ್ತಾನೆ.

ಈ ಸಂಗತಿಯನ್ನು ದಾಸರು ಮೋಹಕವಾಗಿ, **ಶ್ರೀಕೃಷ್ಣನು ಕಂಸನಿಗೆ ಅಂಜಿ ರಾತ್ರಿಯ ಸಮಯದಲ್ಲಿ ತೆರಳಿದ** ಎಂದು ಅಪಹಾಸ್ಯ ಮಾಡುತ್ತಾರೆ.

**ಶ್ರೀ ಶ್ರೀಕೇಶವನಿಧಿತೀರ್ಥರು**



## ಮಧ್ವನವರಾತ್ರೋತ್ಸವ ಹಾಗೂ ಯತಿಕುಲ ಚಕ್ರವರ್ತಿ ಶ್ರೀ ಶ್ರೀ ವಿಜ್ಞಾನನಿಧಿತೀರ್ಥ ಶ್ರೀಪಾದಂಗಳವರ ಬೃಂದಾವನ ಪ್ರತಿಷ್ಠಾ ಮಹೋತ್ಸವ

### 3-2-2011 ರಿಂದ 12-2-2011ರವರೆಗೆ

### ಪ್ರತಿನಿತ್ಯ ಕಾರ್ಯಕ್ರಮಗಳು

| | |
|---|---|
| ಬೆಳಿಗ್ಗೆ 7 ರಿಂದ 9ರವರೆಗೆ | ಸರ್ವಮೂಲ, ಶ್ರೀಮದ್ಭಾಗವತ, ಚತುರ್ವೇದ, ಶ್ರೀಸುಮಧ್ವವಿಜಯ, ಪವಮಾನ ಪಾರಾಯಣ, ಇತ್ಯಾದಿ. |
| 9 ರಿಂದ 12ರವರೆಗೆ | ಹೋಮಗಳು |
| 12 ಘಂಟೆಗೆ | ಮಹಾಪೂಜೆ |
| ಮಧ್ಯಾಹ್ನ 3 ರಿಂದ 5 | ಪ್ರತಿಭಾ ಪುರಸ್ಕಾರಕ್ಕಾಗಿ ಸ್ಪರ್ಧೆ |
| ಸಂಜೆ 5 ರಿಂದ 6-30 | ಉಪನ್ಯಾಸ |
| 7-30 | ಮಹಾಮಂಗಳಾರತಿ |

### ವಿಶೇಷ ಕಾರ್ಯಕ್ರಮ

### 3-2-2011

| | |
|---|---|
| ಬೆಳಿಗ್ಗೆ 8 ಘಂಟೆಯಿಂದ | ಶ್ರೀ ಶ್ರೀವಿಜ್ಞಾನನಿಧಿತೀರ್ಥರ ಬೃಂದಾವನ ಪ್ರತಿಷ್ಠಾ ಅಂಗವಾಗಿ ಕಲಶ ಸ್ಥಾಪನೆ |
| 10 ರಿಂದ 12 | ಉಪನ್ಯಾಸ **ಸನ್ಯಾಸಪದ್ಧತಿ** ಡಾ॥ ಸತ್ಯನಾರಾಯಣಾಚಾರ್ಯ |
| ಮದ್ಯಾಹ್ನ 3 ರಿಂದ 5 | ವಿಚಾರ ಸಂಕಿರಣ **ಬೃಂದಾವನ ಮಹತ್ವ 1** |
| ಸಂಜೆ 6-30 ರಿಂದ | ಪಾರಾಯಣ ಮತ್ತು ಅಧಿವಾಸಗಳು |

### 4-2-2011

| | |
|---|---|
| ಬೆಳಿಗ್ಗೆ 8 ಘಂಟೆಯಿಂದ | ಪ್ರತಿಷ್ಠಾಂಗ ಹೋಮಗಳು |
| 10 ರಿಂದ 12 | ಉಪನ್ಯಾಸ ಶ್ರೀ **ವಿಜ್ಞಾನನಿಧಿಗಳ ಸಾಧನೆಗಳು** ಮೋಹನಾಚಾರ್ |
| ಮದ್ಯಾಹ್ನ 3 ರಿಂದ 5 | ವಿಚಾರಸಂಕಿರಣ **ಬೃಂದಾವನ ಮಹತ್ವ 2** |

ವಿದ್ಯಾಪ್ರಸನ್ನತೀರ್ಥರ
ಕೃತಿಗಳ ಬಗ್ಗೆ

# ಹರಿ-ಗುರು ಭಕ್ತಿ ಪ್ರತಿಪಾದನೆ

ನಮ್ಮ ಹರಿದಾಸರು ತಮ್ಮ ಕೃತಿಗಳಲ್ಲಿ ಶ್ರೀಹರಿನಾಮಸ್ಮರಣೆಗೆ ಪ್ರಾಮುಖ್ಯತೆ ಕೊಟ್ಟು ದಾಸಸಾಹಿತ್ಯವನ್ನು ಶ್ರೀಮಂತಗೊಳಿಸಿದ ಮಹಾಮಹಿಮರು. ವಿದ್ಯಾಪ್ರಸನ್ನತೀರ್ಥರೂ ಕೂಡ ಹರಿ-ಗುರು ಭಕ್ತಿಯ ಪ್ರತಿಪಾದನೆಯನ್ನು ಈ ರೀತಿ ತಿಳಿಸಿದ್ದಾರೆ.

**ಗೋವಿಂದ ಗೋವಿಂದನೆಂದು ನುಡಿಯಲು**
**ಎಂದಿಗೂ ತೋರದ ನಂದವ ಪೊಂದುವಿ**
**ವಾಮನ ವಾಮನನೆಂದು ಪೊಗಳಲು**
**ತಾಮಸವಿಲ್ಲದೆ ಕಾಮಿತ ಪೊಂದುವಿ ॥ 3॥**

ಶ್ರೀಹರಿಗೋವಿಂದನ ಸ್ಮರಣೆಯ ಫಲಶ್ರುತಿಯನ್ನು ಹರಿದಾಸರು ಬಹುಮಾರ್ಮಿಕವಾಗಿ ವರ್ಣಿಸಿದ್ದಾರೆ. ತಾಮಸವಿಲ್ಲದೆ ಕಾಮಿತವನ್ನು ಹೊಂದಲು ಶ್ರೀಹರಿಗೆ ಶರಣಾಗಲು ತಿಳಿಸಿದ್ದಾರೆ

ವಿದ್ಯಾಪ್ರಸನ್ನತೀರ್ಥರ ಕೃತಿಗಳಲ್ಲಿ ಗುರು ಭಕ್ತಿಯ ಉಲ್ಲೇಖವಿದೆಯೇ?

ಮಧ್ವಮತ ಸ್ಥಾಪಕರಾದ ಶ್ರೀಮದಾನಂದತೀರ್ಥ ಗುರುಗಳನ್ನು ಹರಿದಾಸರು ತಮ್ಮ ಕೃತಿಗಳಲ್ಲಿ ಭಕ್ತಿಯಿಂದ ವರ್ಣಿಸಿದ್ದಾರೆ.

**ಮಧ್ವರಾಯರ ಕರುಣೆ ಪಡೆಯಿರೊ ॥ಪ॥**

**ಸಿದ್ಧವು ಇಹಪರದಿ ಸೌಖ್ಯವು**
**ವೀರವೈಷ್ಣವಮತ ತೋರಿದವರ ನಂಬಿ**
**ವೀರವೈಷ್ಣವರಾಗಿ ಬಾಳಿರೋ ॥ 1॥**

**ಸತ್ಯಧರ್ಮಗಳಿಗೆ ಮೂರ್ತಿಗಳಾದ ಜೀ**
**ವೋತ್ತಮರನು ನಂಬಿ ಬಾಳಿರೋ ॥ 2॥**

**ಉನ್ನತ ಧ್ಯೇಯವ ಸ್ವರ್ಣಾದಕ್ಷರದಲ್ಲಿ**
**ಚೆನ್ನಾಗಿ ಬೋಧಿಸಿದ ಪ್ರಸನ್ನ ಶ್ರೀ ॥ 3॥**

**-ಪ್ರಸನ್ನ ಸಾಹಿತ್ಯಸೌರಭ (ಪುಟ-19)**

ಗುರು ಮಧ್ವರಾಯರ ಕರುಣೆಯನ್ನುಗಳಿಸಿ ವೀರ ವೈಷ್ಣವರಾಗಲು ನಮ್ಮ ಹರಿದಾಸರು ಇಲ್ಲಿ ಕರೆಯಿತ್ತಿರುವರು. ಜೀವೋತ್ತಮರನ್ನು ನಂಬಿ ಅವರ ಅನುಗ್ರಹಕ್ಕೆ ಪಾತ್ರರಾಗಲು ಶ್ರೀವಿದ್ಯಾಪ್ರಸನ್ನತೀರ್ಥರು ಈ ಕೃತಿಯಲ್ಲಿ ಉಲ್ಲೇಖಿಸಿದ್ದಾರೆ. ಇಂತಹ ಹರಿದಾಸರ ಚರಣ ಕಮಲಗಳಿಗೆ ಅನಂತ ನಮನಗಳು.

**✍ ರಾಘವೇಂದ್ರ ಎಸ್. ಆಡಬಡ್ಡಿ**
**ಬೆಂಗಳೂರು ಅಂತರಾಷ್ಟ್ರೀಯ ವಿಮಾನ ನಿಲ್ದಾಣ, ದೇವನಹಳ್ಳಿ, ಬೆಂಗಳೂರು.**

**ಶ್ರೀವಿದ್ಯಾಪ್ರಸನ್ನತೀರ್ಥರು ಹೇಳಿದ ಕಥೆಗಳು**

# ಕುಬುಜೆ ಸುಂದರಿಯಾದಳು

**ಗಂಧದ ಲೋಭಕೆ ನಂದದಿ ಕುಬುಜೆಯ ।**
**ಸುಂದರಿ ಮಾಡಿದ ಅಂದಗಳನು॥**

**-ಸಮಗ್ರ ದಾಸಸಾಹಿತ್ಯ ಸಂಪುಟ-28 (ಪುಟ-186)**

**ಕೃಷ್ಣ**ನು **ಕುಬುಜೆ**ಯನ್ನು ಸುಂದರಿಯನ್ನಾಗಿಸಿದ ಕಥೆಯನ್ನು ವ್ಯಂಗ್ಯಪದಗಳಲ್ಲಿ ವರ್ಣಿಸುತ್ತಾರೆ.

ಶ್ರೀಕೃಷ್ಣನು ಮಥುರೆಯಿಂದ ನಂದಗೋಕುಲಕ್ಕೆ **ಕಂಸ**ನ ಆಹ್ವಾನದ ಮೇರೆಗೆ ಬರುತ್ತಾನೆ. ಮಾರ್ಗಮಧ್ಯೆ ಶ್ರೀಕೃಷ್ಣನು ತನ್ನ ಚಮತ್ಕಾರವನ್ನು ತೋರುತ್ತಾ ಸಾಗುತ್ತಾನೆ. ಅಂತಹ ಒಂದು ಸನ್ನಿವೇಶವು ಕುಬುಜೆಗಾಯಿತು.

**ಕುಬುಜೆ**ಯ ಕೆಲಸ, ನಿತ್ಯವೂ ಕಂಸನಿಗೆ ಸುಗಂಧವನ್ನು ಸಲ್ಲಿಸವುದಾಗಿತ್ತು. ಅವಳ ಹೆಸರೇ ಸೂಚಿಸುವಂತೆ ಮೈ ಅಂಕುಡೊಂಕಾಗಿತ್ತು. ಕೃಷ್ಣನು ಪುರಪ್ರವೇಶ ಮಾಡುವ ಸಮಯದಲ್ಲಿ ಕುಬುಜೆಯು ಎದುರಾಗುತ್ತಾಳೆ. ಕೃಷ್ಣನ ಕೃಪಾಕಟಾಕ್ಷವು ಅವಳ ಮೇಲೆ ಬೀಳುತ್ತದೆ. ಕೃಷ್ಣನು ರಥದಿಂದ ಕೆಳಗಿಳಿಯುತ್ತಾನೆ. ಕುಬುಜೆಯು ಬಾಗಿ ನಮಸ್ಕರಿಸುತ್ತಾಳೆ. ಕೃಷ್ಣನಿಗೆ ಗಂಧವನ್ನು ಸಮರ್ಪಿಸುತ್ತಾಳೆ. ಆಗ ಕೃಷ್ಣನು ಅವಳ ಕಾಲ್ಗಳ ಮೇಲೆ ತನ್ನ ಪಾದದಿಂದ ಒತ್ತಿ ಗಲ್ಲವನ್ನು ಹಿಡಿದು ಮೇಲಕ್ಕೆ ಎತ್ತುತ್ತಾನೆ. ಕೃಷ್ಣನ ಸ್ಪರ್ಶದಿಂದ ಕುಬುಜೆಯು ಸುಂದರಿಯಾಗುತ್ತಾಳೆ.

ಕೃಷ್ಣ ಗಂಧವನ್ನು ಸ್ವೀಕರಿಸುವ ಲೋಭದಿಂದ ಅವಳನ್ನು ಸುಂದರಿಯಾಗಿ ಮಾಡಿದ ಎಂಬ ಕೊಂಕು ಪದಗಳನ್ನು ಪ್ರಸನ್ನತೀರ್ಥರು ಈ ಸಾಲುಗಳಲ್ಲಿ ಬಳಸಿದ್ದಾರೆ.

**ಶ್ರೀ ಶ್ರೀಕೇಶವನಿಧಿತೀರ್ಥರು**

**ಶ್ರೀವಿದ್ಯಾಪ್ರಸನ್ನತೀರ್ಥರು ಹೇಳಿದ ಕಥೆಗಳು**

# ಜಾರಕೃಷ್ಣ

**ನಾರಿಜನರುಗಳ ಸೀರೆಯ ಕದಿಯುತ**
**ಕೋರಿಕೆ ಪೊಂದಿದ ಜಾರತನವ॥**

**-ಸಮಗ್ರ ದಾಸಸಾಹಿತ್ಯ ಸಂಪುಟ-28 (ಪುಟ-187)**

ಕೃಷ್ಣನ ಜಾರತನದ ಕಥೆಯನ್ನು ಶ್ರೀವಿದ್ಯಾಪ್ರಸನ್ನತೀರ್ಥರು ಈ ಸಾಲುಗಳಲ್ಲಿ ವ್ಯಂಗ್ಯ ಪದಗಳಿಂದ ತಿಳಿಸಿಕೊಟ್ಟಿದ್ದಾರೆ.

ಶ್ರೀಕೃಷ್ಣನು ಗೋಕುಲದಲ್ಲಿನ ಮಹಿಳೆಯರಿಗೆ ಸಾಧುವಾದ ಹಿಂಸೆಯನ್ನು ನೀಡುತ್ತಿದ್ದನು. ಹೆಣ್ಣು ಮಕ್ಕಳನ್ನು ಹಿಂಸಿಸುವುದೆಂದರೆ ಶ್ರೀಕೃಷ್ಣನಿಗೆ ಬಲು ಮೋಜು.

ಹೆಣ್ಣು ಮಕ್ಕಳು ಎಂದಿನಂತೆ ಯಮುನೆಯಲ್ಲಿ ಸ್ನಾನಮಾಡುತ್ತಿದ್ದರು. ಅವರು ತಮ್ಮ ಉಟ್ಟಬಟ್ಟೆಗಳನ್ನು ನದಿಯ ದಡದ ಮೇಲೆ ಕಳಚಿಟ್ಟಿದ್ದರು. ಹೆಣ್ಣು ಮಕ್ಕಳು ವಿವಸ್ತ್ರವಾಗಿ ಸ್ನಾನಮಾಡುವುದನ್ನು ಕಂಡ ಕೃಷ್ಣ ಅವರಿಗೆ ತಕ್ಕ ಶಿಕ್ಷೆಯನ್ನು ವಿಧಿಸಬೇಕೆಂದು ನಿಶ್ಚಯಿಸುತ್ತಾನೆ. ಅದರಂತೆಯೆ ಶ್ರೀಕೃಷ್ಣನು ಅವರ ವಸ್ತ್ರಗಳನ್ನು ಮರದ ಮೇಲೆ ಇಟ್ಟು ಬಿಡುತ್ತಾನೆ. ಆ ಸ್ತ್ರಿಯರು ಸ್ನಾನ ಮಾಡುತ್ತಿರುವ ಬಂಗಿಯಲ್ಲೇ ಹೋಗಿ ಅವರು ವಸ್ತ್ರವನ್ನು ತೆಗೆದುಕೊಳ್ಳುವಂತೆ ಸೂಚಿಸುತ್ತಾನೆ.

ಕೃಷ್ಣನ ಈ ಕೃತ್ಯದಿಂದ ಹೆಂಗಸರು ವಿವಸ್ತ್ರವಾಗಿ ಸ್ನಾನ ಮಾಡಬಾರದೆಂಬ ನೀತಿಯನ್ನು ದಾಸರು ತಿಳಿಸುತ್ತಾರೆ.

ಕೃಷ್ಣ ಜಾರ ಎಂಬ ಲೋಕಾರೂಡಿ ಪದಕ್ಕೆ ಅನುಗುಣವಾದ ಕಥೆಯನ್ನು ಇಲ್ಲಿ ತಿಳಿಸಿದ್ದಾರೆ.

**ಶ್ರೀ ಶ್ರೀಕೇಶವನಿಧಿತೀರ್ಥರು**



**ವಿದ್ಯಾಪ್ರಸನ್ನತೀರ್ಥರ ಕೃತಿಗಳ ಬಗ್ಗೆ**

# ಮಧುರವು ಮಧುರಾನಾಥನ ನಾಮವು

**ಕಲಿಯುಗದಲ್ಲಿ ಹರಿನಾಮವ ನೆನೆದರೆ ಕುಲಕೋಟಿಗಳುದ್ಧರಿಸುವವೋ** ಎಂಬ ಶ್ರೀ ಶ್ರೀಪಾದರಾಜರ ಉಕ್ತಿಯಂತೆ ಈ ಯುಗದಲ್ಲಿ ಹರಿನಾಮ ಸ್ಮರಣೆಯೇ ತಾರಕವು. **ಆ ಮಂತ್ರ ಈಮಂತ್ರ ಜಪಿಸಿಕೆಡಲು ಬೇಡ ಸೊಮಶೇಖರ ತನ್ನ ಭಾವೆಗೆ ಪೇಳಿದ ರಾಮ ಮಂತ್ರವ ಜಪಿಸೋ ಮನುಜ** ಎಂದು ಪುರಂದರದರಾಸರು ಅಪ್ಪಣೆ ಕೊಡಿಸಿದ್ದಾರೆ. ಭಗವಂತನ ಅನಂತಾನಂತ ನಾಮಗಳೂ ಮಧುರವಾಗಿವೆ. ವರ್ಣಾತ್ಮಕ, ಧ್ವನ್ಯಾತ್ಮಕ, ಶಬ್ದಾತ್ಮಕ, ಸಕಲವೂ ಭಗವಂತನ ಗುಣಗಳನ್ನೇ ತಿಳಿಸುತ್ತವೆ. ಅಂಥ ಭಗವಂತನ ನಾಮವು ದಧಿ, ಮಧು, ದ್ರಾಕ್ಷಾ ಇತ್ಯಾದಿ ರಸಗಳಿಗಿಂತ ಮಧುರವಾಗಿದೆ ಅಂತ ತಿಳಿಸುತ್ತಾರೆ ಶ್ರೀ ವಿದ್ಯಾಪ್ರಸನ್ನರು. ಇದನ್ನೇ ಶ್ರೀ ವಿಜಯದಾಸರು **ಪಾನವ ಮಾಡುವದು ನಾಮಾಮೃತ** ಎಂಬ ಪದದಲ್ಲಿ ತಿಳಿಸಿದ್ದಾರೆ.

ಸುಂದರವದನನಾದ, ಅರವಿಂದ ನಯನನಾದ, ನಂದ ಕುಮಾರನಾದ, ಯದುಕುಲತಿಲಕನಾದ, ಸದಮಲಚರಿತನಾದ, ಮದನ ಪಿತನಾದ, ಗಾಯಪ್ರಿಯನಾದ, ದಾನವರಿಗೆ ಕಾಲನಾದ, ಹೇಮವಸನನಾದ, ಕೋಮಲ ರೂಪನಾದ ಪನ್ನಗಶಯನನಾದ, ಚಿನ್ಮಯರೂಪನಾದ, ಭಾಮಕಾಂತನ ಲೀಲೆಗಳನ್ನು ಪೊಗಳುವ ಪ್ರಸನ್ನನ ನಾಮವು ಸಾಧಕರಿಗೆ ವಿಶೇಷ ಫಲಕಾರಿಯೆಂಬುದೇ ಇದರ ಮರ್ಮ.

ಚರಿತ್ರೆಯಲ್ಲಿ ಈ ನಾಮಾಮೃತವನ್ನು ಪಾನ ಮಾಡಿದಂಥ ಅನೇಕ ಭಕ್ತ ಶಿರೋಮಣಿಗಳಿದ್ದಾರೆ. ಅವರ ಚರಿತ್ರೆಯಲ್ಲಿಯೂ ಕೂಡ ನಾಮಸ್ಮರಣೆಯ ಮಹಾತ್ಮೆಯನ್ನು ಕಾಣಬಹುದು. ಶ್ರೀ ಶೇಷದಾಸರು ಒಂದು ಸುಳಾದಿಯ ಜತೆಯಲ್ಲಿ **ನಾಮ ಮಾತ್ರವ ನೆನಿಯೆ ಭವರೋಗ ಪರಿಹಾರ ಶ್ರೀಮನೋಹರ ಗುರುವಿಜಯವಿಠ್ಠಲರೇಯ** ಎಂದು ಹರಿನಾಮದ ಮಹಿಮೆಯನ್ನು ಸೂಚಿಸಿದ್ದಾರೆ. ಶ್ರೀಜಗನ್ನಾಥದಾಸರು ನಾಮಸ್ಮರಣೆಗೆ ಒಂದು ಸಂಧಿಯನ್ನೇ ಶ್ರೀಹರಿಕಥಾಮೃತಸಾರದಲ್ಲಿ ರಚಿಸಿ ನಾಮಸ್ಮರಣೆಯ ಮಹಾತ್ಮೆಯನ್ನು ತಿಳಿಸಿದ್ದಾರೆ.

ಸಕಲ ಇಷ್ಟಾರ್ಥ ಸಿದ್ಧಿದಾಯಕ, ಪಾಪ ಪರಿಹಾರಕ ಮಂತ್ರ ಹರಿನಾಮ ಎಂಬುದು ನಿಸ್ಸಂಶಯ. ಶ್ರೀ ವಿದ್ಯಾಪ್ರಸನ್ನರ ಕೃತಿಯ ಮೇಲಿನ ನೋಟದ ಒಂದು ಅನಿಸಿಕೆಯನ್ನು ಓದುಗರೊಡನೆ ಹಂಚಿಕೊಳ್ಳುವ ಇದೊಂದು ಯತ್ನವೇ ಹೊರತು ಪೂಜ್ಯರ ಕೃತಿಗಳ ಅರ್ಥೈಸುವದು ಈ ಪಾಮರನಿಂದ ಅಸಾಧ್ಯ. ಈ ಕುಸುಮಗಳನ್ನು ಕುಲಸ್ವಾಮಿಯಾದ ಕೊಪ್ಪರ ಲಕ್ಷ್ಮೀನರಸಿಂಹನ ಪಾದಾರವಿಂದಕ್ಕೆ ಅರ್ಪಿಸುವೆ.

**ಎಂ.ಕೆ. ವಿಜಯೀಂದ್ರ**
**ನಂ. 5, 5ನೇ ಅಡ್ಡರಸ್ತೆ, ಸುಪ್ರಜಾನಗರ, ಕೊಣನಕುಂಟೆ, ಬೆಂಗಳೂರು-72**

**ವಿದ್ಯಾಪ್ರಸನ್ನತೀರ್ಥರ**
**ಕೃತಿಗಳ ಬಗ್ಗೆ**

## ಹರಿನಾಮಮೃತ ಪಾನ

ಮಧುರವು ಮಧುರಾನಾಥನ ನಾಮವು ॥ ಪ॥

ದಧಿ ಮಧು ದ್ರಾಕ್ಷಾ ಸುಧೆ ರಸಗಳಿಗಿಂತ ॥ ಅ.ಪ॥

ಸುಂದವದನನ ಅರವಿಂದನಯನನ।
ನಂದಕುಮಾರನ ಚಂದದ ನಾಮವು ॥ 1॥

ಯದುಕುಲತಿಲಕನ ಸದಮಲಚತನ।
ಮದನಪಿತನ ನಾಮ ಮುದದಲಿ ಪಾಡಲು ॥ 2॥

ಗಾನವಿಲೋಲನ ದಾನವ ಕಾಲನ।
ಲೀಲೆಗಳನ್ನು ಸದಾ ಲಾಲಿಸಿ ಪೊಗಳಲು ॥ 3॥

ಹೇಮವಸನನ ಕೋಮಲರೂಪನ।
ಭಾಮಾಕಾಂತನ ಪ್ರೇಮದ ನಾಮವು ॥ 4॥

ಪನ್ನಗಶಯನನ ಚಿನ್ಮಯರೂಪನ।
ಸನ್ನುತಿಸಲಿಕೆ ಪ್ರಸನ್ನನ ನಾಮವು ॥ 5॥

### ಶ್ರೀ ಯಶೋನಿಧಿತೀರ್ಥರು 1830–1840

ಶ್ರೀ ಶ್ರೀಪಾದರಾಜ ಮಠದ ಶಾಖಾಮಠವಾದ ಓಡಪಳ್ಳಿ ಮುಳಬಾಗಿಲು
ಶ್ರೀಪಾದರಾಜಮಠದ 5ನೇ ಯತಿಗಳು
ಶ್ರೀ ಸುಗುಣನಿಧಿಗಳು ಹಾಗೂ ಶ್ರೀ ತಪೋನಿಧಿತೀರ್ಥ ರಿಂದ ಆಶ್ರಮ ಸ್ವೀಕಾರ–
ಶ್ರೀ ಆನಂದನಿಧಿತೀರ್ಥರಿಗೆ ಆಶ್ರಮ ನೀಡಿ ತಮಿಳುನಾಡಿನ ಪಳ್ಳಿಪಾಳ್ಯಂನಲ್ಲಿ
ಬೃಂದಾವನಸ್ಥರಾದರು
ಪುಷ್ಯ ಶುದ್ಧ ದಶಮಿ ಆರಾಧನೆ ದಿನ.



**ಪ್ರಸನ್ನಶೂರ ಮಾಧವತೀರ್ಥರಿಗೆ**
**ನಮನ**

## ಶ್ರೀ ಮಾಧವತೀರ್ಥ ಸಂಸ್ಥಾನ ಅಂದು–ಇಂದು

ಶ್ರೀ 108 ಶ್ರೀವಿಜ್ಞಾನನಿಧಿಗಳು ತಮ್ಮ ಜೀವಿತಕಾಲದಲ್ಲಿ ಯಾರನ್ನೂ ಯಾವಕಾರಣಕ್ಕೂ ಎಂತಹ ಸಂದರ್ಭದಲ್ಲೂ ನೋಯಿಸಲಿಲ್ಲ, ಅಲ್ಲದೆ ಸತ್ಯಕ್ಕಾಗಿ ಹೋರಾಡಿದವರು, ವ್ಯಕ್ತಿಯ ಸ್ವತಂತ್ರಕ್ಕಾಗಿ ಪಣತೊಟ್ಟವರು, ಯಾವುದೇ ಸಂಸ್ಥೆಯಾದರೂ ಅವುಗಳನ್ನು ನಾಶಪಡಿಸಲು ಇಚ್ಛಿಸಿದವರಲ್ಲ ,ಅಭಿವೃದ್ಧಿ ಪಡಿಸಬೇಕು ಅಥವಾ ಯಥಾ ಸ್ಥಿತಿ ಕಾಪಾಡಬೇಕು ಎಂಬುದೇ ಅವರ ಸಂಕಲ್ಪ. ಈಗ ತಾನೇ ದೈವಾಧೀನರಾದ **ಪ್ರಸನ್ನ ಶೂರ ಮಾಧವತೀರ್ಥರು** ಮತ್ತು ಮಾಧವತೀರ್ಥ ಸಂಸ್ಥಾನವು ಜ್ವಲಂತ ನಿದರ್ಶನವಾಗಿದೆ. ಪ್ರಸನ್ನಶೂರ ಮಾಧವತೀರ್ಥರ ಪರಮ ಗುರುಗಳಾದ ಸತ್ಯಮಾಧವತೀರ್ಥರ ಕಾಲದಲ್ಲಿ ಮಠದ ಅಭಿವೃದ್ಧಿಗೆ ಸರ್ಕಾರದಿಂದ ಮಠಕ್ಕೆ ಸಲ್ಲಬೇಕಾದ ಹಣವನ್ನು ಸರಿಯಾದ ಪ್ರಮಾಣದಲ್ಲಿ ಸಲ್ಲುವಂತೆ ಉಪಕಾರ ಮಾಡಿದರು.

ಸತ್ಯಮಾಧವತೀರ್ಥರು ಶಿಷ್ಯರನ್ನು ನಿಯಮಿಸದೆ ದೇಹತ್ಯಾಗ ಮಾಡಿದಾಗ ಮಾಧವತೀರ್ಥ ಸಂಸ್ಥಾನದ ಹೆಸರನ್ನು ಕೆಡಿಸಲು ಕೆಲವು ಕುಹುಕಿಗಳು ಪ್ರಯತ್ನಿಸಿದರು. ಆಗ ಸರಿಯಾದ ಉತ್ತರಾಧಿಕಾರಿಯನ್ನು ಆರಿಸಿ ಶ್ರೀರಾಮಚಂದ್ರದೇವರ ಪೂಜೆಯು ನಿರಾತಂಕವಾಗಿ ನಡೆಯುವಂತೆ ಮಾಡಿದರು. ಮತ್ತೊಮ್ಮೆ ಹೀಗಾಗದಿರಲು ಪತ್ರಕರ್ತ, ರಾಜಕಾರಣಿ, ಕೋಲಾರ ವಾಣಿ ಸಂಪಾದಕರಾದ **ಪಿ.ವಿ.ನರಸಿಂಹಮೂರ್ತಿ**ಯವರನ್ನು ಮಠದ ದಿವಾನರನ್ನಾಗಿ ಆರಿಸಿಕೊಟ್ಟರು. ವಿಧಿವಶಾತ್ ಪ್ರಸನ್ನಶೂರ ಮಾಧವತೀರ್ಥರ ಗುರುಗಳಾದ ವಿಜಯಮಾಧವತೀರ್ಥರು ಉತ್ತರಾಧಿಕಾರಿಯನ್ನು ನಿಯಮಿಸದಂತೆ ವಿಧಿವಶರಾದಾಗ ಮತ್ತೊಮ್ಮೆ ಮಾಧವತೀರ್ಥ ಸಂಸ್ಥಾನದಲ್ಲಿ ಬಿಕ್ಕಟ್ಟಿನ ಪರಿಸ್ಥಿತಿ ಎದುರಾಯಿತು. ಶ್ರೀ ವಿಜ್ಞಾನನಿಧಿತೀರ್ಥರು ಪ್ರಸನ್ನಶೂರ ಮಾಧವತೀರ್ಥರನ್ನು ಉತ್ತರಾಧಿಕಾರಿಯಾಗಿ ಮಾಡಿದ್ದರಿಂದ ಇಂದು ಮಾಧವತೀರ್ಥ ಸಂಸ್ಥಾನವು ಸ್ವತಂತ್ರವಾಗಿ ತನ್ನ ತನವನ್ನು ಉಳಿಸಿಕೊಂಡು ಸಂಸ್ಥೆಯನ್ನು ಅಭಿವೃದ್ಧಿ ಪಥದಲ್ಲಿ ನಡೆಸುವಂತಾಗಿದೆ. ಈ ಕಾರ್ಯದಲ್ಲಿ ಪ್ರಸನ್ನಶೂರ ಮಾಧವತೀರ್ಥರು ಧೈರ್ಯದಿಂದ ಸಾಧಿಸಲು ಬೆನ್ನೆಲುಬಾಗಿ ಶ್ರೀವಿಜ್ಞಾನನಿಧಿತೀರ್ಥರು ಸಹಕರಿಸಿದ್ದರೆಂಬುದು ಜಗಜ್ಜನಿತವಾಗಿದೆ.

**ಅರವಿಂದ ಕಟ್ಟಿ (ಕಲಾವಿದ)**
**ಶ್ರೀಬೇನಕ, ಪಿ.ಸಿ. ಎಕ್ಸ್‌ಟೆನ್, ಕೋಲಾರ.**

ವಿದ್ಯಾಪ್ರಸನ್ನತೀರ್ಥರ
ಕೃತಿಗಳ ಬಗ್ಗೆ

# ಶ್ರೀ ಹರಿಯ ನಾಮಾವಳಿ

ಕೇಶವಕೇಶವನೆಂದು ನುಡಿಯಲು
ಈ ಸಂಸಾರದ ಕ್ಲೇಶ ತೊಲಗುವುದು
ಮಾಧವ ಮಾಧವನೆಂದು ನುಡಿಯಲು
ಮಾದರಿಯಿಲ್ಲದ ಮೋದವ ಪೊಂದುವಿ ॥ 1॥

ಗೋವಿಂದಗೋವಿಂದನೆಂದು ನುಡಿಯಲು
ಎಂದಿಗೂ ತೋರದ ನಂದವ ಪೊಂದುವಿ
ವಾಮನ ವಾಮನನೆಂದು ಪೊಗಳಲು
ತಾಮಸವಿಲ್ಲದೆ ಕಾಮಿತ ಪೊಂದುವಿ ॥ 2॥

ಶ್ರೀಧರಶ್ರೀಧರನೆಂದು ನುಡಿಯಲು
ಈ ಧರೆಯೊಳು ನಿನಗೆ ಖೇದವೆಲ್ಲಿಯದು
ಅಚ್ಯುತಅಚ್ಯುತನೆಂದು ಪೊಗಳಲು
ಉಚ್ಚಕುಲದಿ ನೀ ಮೆಚ್ಚಿಗೆ ಪೊಂದುವೆ ॥ 3॥

ನರಹರಿನರಹರಿಯೆಂದು ನುಡಿಯಲು
ಪರತರಸುಖವನು ನಿರುತವು ಪೊಂದುವಿ
ಶ್ರೀಕೃಷ್ಣ ಶ್ರೀಕೃಷ್ಣನೆಂದು ಪೊಗಳಲು
ಕಷ್ಟವಿಲ್ಲದೆ ನೀ ಇಷ್ಟವ ಪೊಂದುವಿ ॥ 4॥

ರಾಘವರಾಘವನೆಂದು ಪೊಗಳಲು
ನೀಗುವೆ ಸುಲಭದಿ ಆಘಗಳೆಲ್ಲವನು
ಭಾರ್ಗವನೆನಲು ಪ್ರಸನ್ನನಾಗಿ ಹರಿ
ದುರ್ಗಮಮೋಕ್ಷಕ್ಕೆ ಮಾರ್ಗವ ತೋರುವೆ ॥ 5॥

-ಪ್ರಸನ್ನ ಸಾಹಿತ್ಯಸೌರಭ (ಪುಟ-138)



ಪ್ರಸನ್ನತೂರ ಮಾಧವತೀರ್ಥರಿಗೆ
ನಮನ

ಕೋಲಾರ ಜಿಲ್ಲೆಯ ಕೈಗನ್ನಡಿಯಂತಿರುವ ಕೋಲಾರವಾಣಿ ಕನ್ನಡ ದಿನ ಪತ್ರಿಕೆಯನ್ನು ಕಟ್ಟಿ ಬೆಳೆಸಿದ ಶ್ರೀಯುತ ಬಿ.ವಿ. ನರಸಿಂಹಮೂರ್ತಿ ಅವರು ಪತ್ರಿಕೆಯನ್ನು ಎಂದಿಗೂ ಮಾರಾಟ ವಸ್ತುವಾಗಿ ಕಂಡವರಲ್ಲ, ಪತ್ರಿಕೆಯ ಮೂಲಕ ಸಮಾಜದ ಏಳಿಗೆ ಸಾಧ್ಯ ಎಂದು ನಂಬಿದ್ದ ಅವರು. ಆ ಮೂಲಕ ಸಮಾಜವನ್ನು ಜಾಗೃತಗೊಳಿಸುವ ಕಾಯಕದಲ್ಲಿ ತೊಡಗಿದ್ದರು.

ಸಮಾಜದ ಏಳು ಬೀಳು, ಅಧಿಕಾರಿ ಮತ್ತು ರಾಜಕಾರಣಿಗಳ ತಪ್ಪು-ಒಪ್ಪುಗಳನ್ನು ಖಡಾ-ಖಂಡಿತವಾಗಿ ಟೀಕಿಸುವ ಬದ್ಧತೆ ಪ್ರದರ್ಶಿಸುತ್ತಿದ್ದು ವ್ಯಾಪಕ ವಿರೋಧವನ್ನು ಎದುರಿಸುತ್ತಿದ್ದರು.

ಕೋಲಾರ ಜಿಲ್ಲೆ ಮಾತ್ರವಲ್ಲದೆ, ರಾಜ್ಯ ಮಟ್ಟದ ರಾಜಕಾರಣಿಗಳೂ ಸಹ ಕೋಲಾರವಾಣಿ ಸಂಪಾದಕೀಯವನ್ನು ಓದಲೇಬೇಕು ಎನ್ನುವಂತಹ ಸ್ಥಿತಿ ನಿರ್ಮಿಸಿದ್ದರಲ್ಲದೆ, ಹಿರಿಯ-ಕಿರಿಯ ಎನ್ನದೆ ಎಲ್ಲ ರೀತಿಯ ರಾಜಕಾರಣಿಗಳ ಮತ್ತು ಅಧಿಕಾರಿಗಳ ಕಿವಿ ಹಿಂಡುವ ಕೆಲಸವನ್ನು **ಸಂಪಾದಕೀಯದ** ಮೂಲಕ ಮಾಡುತ್ತಿದ್ದರು.

**ಸಂಪಾದಕೀಯ** ಸಿದ್ಧ ಪಡಿಸುವ ವೇಳೆ ವಸ್ತು ಸ್ಥಿತಿಯನ್ನು ಹೊರತು ಪಡಿಸಿ, ವ್ಯಕ್ತಿ ಅಥವಾ ರಾಜಕಾರಣಿ ತಮಗೆ ಹತ್ತಿರದವರು ಇಲ್ಲಾ ದೂರದವರು ಎಂಬ ಭೇಧ ಭಾವ ಮಾಡದಂತೆ ನೇರವಾಗಿ ಬರೆದು ಪ್ರಕಟಿಸುವ ಮೂಲಕ **ನಿಷ್ಠೂರವಾದಿ** ಎನಿಸಿಕೊಂಡಿದ್ದರು.

ತಮ್ಮ ಪತ್ರಿಕೋದ್ಯಮದ ಅವಧಿಯಲ್ಲಿ ಯುವಕರಿಗೆ ಮತ್ತು ಹೊಸಬರಿಗೆ ಅವಕಾಶ ನೀಡುವ ಕಾರ್ಯದಲ್ಲಿ ತೊಡಗಿದ್ದ ಬಿ.ವಿ.ನರಸಿಂಹಮೂರ್ತಿಯವರು ಹೊಸಬರ ತಪ್ಪುಗಳನ್ನು ತಿದ್ದಿ ಹೇಳುವುದರಲ್ಲೂ ನಿಷ್ಠೂರವಾದಿಗಳಾಗಿದ್ದರು. ಅವರ ಆ ಭಾವನೆಯ ಪರಿಣಾಮವೇ ಇಂದು ಅವರಲ್ಲಿ ಕೆಲಸ ಕಲಿತವರು ಉನ್ನತ ಮಟ್ಟದಲ್ಲಿ ಕಾರ್ಯನಿರ್ವಹಿಸುವಂತಾಗಿದೆ.

(ಕೋಲಾರ ವಾಣಿ ದಿನ ಪತ್ರಿ ದಿನಾಂಕ 1-1-2011)
ಸಂಗ್ರಹಃ- ವೆಂಕಟೇಶ (ಮಡಿ)
39, ಮುನೇಶ್ವರ ನಗರ, ಹೊಸಕೇರೆಹಳ್ಳಿ, ಕೆರೆಕೊಡಿ, ಬನಶಂಕರಿ, ಬೆಂಗಳೂರು-85

ಪ್ರಸನ್ನಶೂರ ಮಾಧವತೀರ್ಥರಿಗೆ
ನಮನ

## ಶ್ರೀಗಳವರ ಸಾಧನೆ

ದೇವಾಲಯ ಸಂರಕ್ಷಣಾ ಸಮಿತಿ ಕಾರ್ಯದರ್ಶಿಗಳಾಗಿ ಜಿಲ್ಲೆಯ ಹಲವಾರು ದೇವಾಲಯಗಳ ಅಭಿವೃದ್ದಿಗೆ ಶ್ರಮಿಸಿದ್ದರು.

1991ರಲ್ಲಿ ಮಾಧವತೀರ್ಥರ ಮೂಲ ಮಹಾಸಂಸ್ಥಾನದ ದಿವಾನರಾಗಿ ನೇಮಕಗೊಂಡರು. 14-10-1996ರಲ್ಲಿ ಮಠಾಧಿಪತಿಗಳಾಗಿ ಪೀಠಾರೋಹಣ ಮಾಡಿದರು.

ತಂಬಿಹಳ್ಳಿಯ ಮಾಧವತೀರ್ಥ ಮೂಲ ಮಹಾಸಂಸ್ಥಾನವು ಸದರಿ ಸ್ವಾಮೀಜಿಯವರು ಅಧಿಕಾರ ವಹಿಸಿಕೊಂಡ ನಂತರವೇ ಹೆಚ್ಚು ಜನಪ್ರಿಯತೆಯನ್ನು ಹೊಂದಿ ಅಪಾರ ಸಂಖ್ಯೆಯ ಭಕ್ತರಿಗೆ ಸಂತೋಷವನ್ನುಂಟುಮಾಡಿದೆ.

**ನಾಲ್ಕು ಕಡೆ ಶಾಖಾ ಮಠಗಳ ಸ್ಥಾಪನೆ:-**

ತಂಬಿಹಳ್ಳಿಯ ಮೂಲ ಮಠದ ಅಭಿವೃದ್ಧಿಯೊಂದಿಗೆ ಮೂರು ಪಟ್ಟಣಗಳಲ್ಲಿ ಭಕ್ತರ ' ಸಹಕಾರದಿಂದ ಮಠದ ಕಾರ್ಯಕ್ಷೇತ್ರವನ್ನು ವಿಸ್ತರಿಸಿದರು.ಬೆಂಗಳೂರಿನ ಹೆಚ್‌ಎಎಲ್ ವಿಮಾನ ನಿಲ್ದಾಣದ ಸಮೀಪ, ಚೆನ್ನೈ ಮತ್ತು ತಮಿಳುನಾಡಿನ ತೂತುಕುಡಿ ಎಂಬಲ್ಲಿ ಮಠಗಳನ್ನು ಆರಂಭಿಸಿ ಭಕ್ತ ಸಮೂಹಕ್ಕೆ ಹರ್ಷವನ್ನು ಂಟುಮಾಡಿದರು.

**ಶಿಕ್ಷಣ ಕ್ಷೇತ್ರಕ್ಕೆ ಶ್ರೀಗಳವರ ಆಶೀರ್ವಾದ**

ತಂಬಿಹಳ್ಳಿಮಠದ ಆಶ್ರಯದಲ್ಲಿ 10 ವರ್ಷಗಳ ಹಿಂದೆಯೇ ಮಾಧವತೀರ್ಥ ವಿದ್ಯಾಮಂದಿರವನ್ನು ಸ್ಥಾಪಿಸಿ ಸುತ್ತಮುತ್ತಲ ಹಳ್ಳಿಗಳ ಬಡ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಕಾರಣರಾದರು.

ಸರ್ಕಾರಿ ಶಾಲೆಗಳಲ್ಲಿ ಹಾಗೂ ಮಾಧವತೀರ್ಥ ವಿದ್ಯಾಮಂದಿರದಲ್ಲಿ ಮಕ್ಕಳಿಗೆ ಬಿಸಿಯೂಟದ ವ್ಯವಸ್ಥೆಯನ್ನು ಸ್ವಾಮೀಜಿಗಳು ಸರಕಾರದ ಆದೇಶಕ್ಕೆ ಮುಂಚಿತವಾಗಿಯೇ ಆರಂಭಿಸಿ ಆದರ್ಶಪ್ರಾಯರಾಗಿದ್ದರು.

**(ಕೋಲಾರ ವಾಣಿ ದಿನ ಪತ್ರಿ ದಿನಾಂಕ 1-1-2011)**
**ಸಂಗ್ರಹ:- ಆದೋನಿ ವಾಸುದೇವಾಚಾರ್ಯ**
**ನಂ. 165, 1ನೇ ಎ, ಮುಖ್ಯರಸ್ತೆ, 8ನೇ ಬ್ಲಾಕ್, ಜಯನಗರ, ಬೆಂಗಳೂರು-85**

ವಿದ್ಯಾಪ್ರಸನ್ನತೀರ್ಥರ
ಕೃತಿಗಳ ಬಗ್ಗೆ

## ಬೇಸಾಯ ಮಾಡಬೇಕು ಬೇಸಾಯ ಮಾಡಬೇಕು

ನಮ್ಮ ದೇಹವನ್ನು ಸುಸ್ಥಿತಿಯಲ್ಲಿಟ್ಟು ಭೋಗಭಾಗ್ಯಗಳನ್ನು ಅನುಭವಿಸಲು ಬೇಕಾದ ಪುಷ್ಕಳ ಆಹಾರವನ್ನು ಪಡೆಯಲು ಭೂಮಿಯನ್ನು ಉತ್ತಿ, ಬಿತ್ತಿ, ಗೊಬ್ಬರ ನೀರುಗಳಿಂದ ಉಪಚರಿಸಿ, ಬೆಳೆ ತೆಗೆಯುತ್ತೇವೆ. ಇದಕ್ಕಾಗಿ ಸದಾ ಶ್ರಮಪಡುತ್ತೇವೆ. ಇದು ಕೇವಲ, ಇಹಲೋಕದಲ್ಲಿರುವಷ್ಟು ಕಾಲ ದೇಹವನ್ನು ಕಾಪಾಡುವುದಕ್ಕಷ್ಟೇ ಸೀಮಿತವಾಯಿತು. ಮುಂದೆ ಹೇಗೆಂಬುದನ್ನು ಶ್ರೀವಿದ್ಯಾಪ್ರಸನ್ನತೀರ್ಥರು ಈ ಕೃತಿಯಲ್ಲಿ ವಿವರಿಸುತ್ತಾರೆ.

ಎಲ್ಲರೂ ಮುಕ್ತಿಗಾಗಿ ಆಸೆ ಪಡುತ್ತೇವೆ. ಆ ಮುಕ್ತಿ ಫಸಲನ್ನು ಪಡೆಯಬೇಕಾದರೆ, ಆದಕ್ಕೆ ಆ ಬೇಸಾಯವನ್ನು ನಮ್ಮ ಹೃದಯವೆಂಬ ಭೂಮಿಯಲ್ಲಿ ಮಾಡಬೇಕು. ಶ್ರೀಮದಾಚಾರ್ಯರಂಥ ಗುರು ಹಿರಿಯರು ದಯಪಾಲಿಸಿರುವ ಜ್ಞಾನ, ಗ್ರಂಥಗಳೆಂಬ ನೀರನ್ನು ಹಾಯಿಸಿ ಧರ್ಮಾಚರಣೆಯೆಂಬ ನೇಗಿಲಿನಲ್ಲಿ ಭಕ್ತಿಯ ನಾಟಿ ಮಾಡಿ, ದುರ್ಜನರಿಂದ ಬರಬಹುದಾದ ವಿಷಯ ಲಾಲಸೆಗಳನ್ನು ಸಜ್ಜನರ ಸಹವಾಸದಿಂದ ದೂರವಿಟ್ಟು, ಸತ್ಕಾರ್ಯವೆಂಬ ಗೊಬ್ಬರವನ್ನು ಹಾಕುತ್ತಿರಬೇಕು. ಹೀಗೆ ಹರಿ-ಗುರುಭಕ್ತಿಯಿಂದ ವ್ಯವಸಾಯ ಮಾಡಿದಾಗ ಮುಕ್ತಿಯೆಂಬ ಧವಸವನ್ನು ಚೀಲ, ಚೀಲಗಳಲ್ಲಿ ಭಗವಂತನು ತುಂಬಿಸಿ ಕೊಡುತ್ತಾನೆ ಎಂಬುದು ಶ್ರೀವಿದ್ಯಾಪ್ರಸನ್ನತೀರ್ಥರ ಹರಿ-ಗುರು ಭಕ್ತಿಗೆ ಮಾರ್ಗದರ್ಶನ.

ನಮ್ಮ ಗುರುಗಳು, ಶ್ರೀಹರಿಯ ಸೇವೆಯನ್ನು ಮಾಡಲು ಹಲವಾರು ಮಾರ್ಗಗಳನ್ನು ತೋರಿಸಿದ್ದಾರೆ. ಆ ಮಾರ್ಗಗಳಲ್ಲಿ ನಮಗೆ ಸೂಕ್ತವಾದುದನ್ನು ಆಯ್ದುಕೊಳ್ಳುವುದು ಅವರವರ ಬುದ್ಧಿಮತ್ತೆ ಹಾಗೂ ಕಾರ್ಯಕ್ಷೇತ್ರಗಳನ್ನು ಅವಲಂಬಿಸುತ್ತದೆ. ವ್ಯವಸಾಯವೆಂಬುದು ಎಲ್ಲರಿಗೂ ತಿಳಿದ ಕೆಲಸ. ಶ್ರೀ ವಿದ್ಯಾಪ್ರಸನ್ನತೀರ್ಥರು ಆ ಮಾರ್ಗದಲ್ಲೇ ನಮಗೆ ದಾರಿ ತೋರಿದ್ದಾರೆ. ಇದೇ ಅವರ ವಿಶೇಷತೆ.

**✍ಶ್ರೀನಾಥ ಕೋನೇಟಿ**
**ನಂ. 149/ವೈ, ಮೊದಲಮಹಡಿ, 50ನೇ ಅಡ್ಡರಸ್ತೆ 3ನೇ ವಿಭಾಗ, ಬೆಂಗಳೂರು-10**

ವಿದ್ಯಾಪ್ರಸನ್ನತೀರ್ಥರ
ಕೃತಿಗಳ ಬಗ್ಗೆ

# ಹೃದಯವೆಂಬ ಕ್ಷೇತ್ರದಲ್ಲಿ ಬೇಸಾಯ

ಬೇಸಾಯ ಮಾಡಬೇಕು ಬೇಸಾಯ ಮಾಡಬೇಕು ॥ ಪ॥

ಹೃದಯವೆಂಬ ಕ್ಷೇತ್ರದಲಿ ಬೇಸಾಯ ಮಾಡಬೇಕು ॥ ಅ.ಪ॥

ಮಧ್ವಾಚಾರ್ಯರವರ ಗ್ರಂಥಗಳೆಂಬ ಸರೋವರ ತುಂಬಿಹದು
ಬುದ್ಧಿ ಜಲವ ವರಗುರುಗಳೆಂಬ ತೂಬಿನಲ್ಲಿ ತರಲಿಬೇಕು
ಶುದ್ಧಧರ್ಮದಾಚರಣೆಗಳೆಂಬ ನೇಗಿಲು ಪಿಡಿಯಬೇಕು
ಮುದ್ದೆಯಾದ ನೆಲ ಮೃದುವಾಗುವ ಪರಿ ನೆಲವನುಳಲಿ ಬೇಕು॥ 1॥

ತತ್ವಜಲವು ಹರಿದೋಡದ ಪರಿಯಲಿ ತೆವರಿ ಹಾಕಬೇಕು
ಸುತ್ತಲು ದುರ್ಜನ ನರಿಗಳ ತಡಿಯಲು ಬೇಲಿ ಹಾಕಬೇಕು
ಉತ್ತಮ ರೀತಿಯ ಭಕುತಿ ಪೈರುಗಳ ನಾಟಿ ಮಾಡಬೇಕು
ಮತ್ತೆ ಪೈರುಗಳು ಒಣಗದಂತೆ ಜಲವನು ಹಾಯಿಸುತಿರಬೇಕು ॥ 2॥

ಬೆಳೆಯುವ ವಿಷಯದ ಅನುಭವದಾಸೆಯ ಕಳೆಯ ಕೀಳಬೇಕು
ಕೊಳವೆಯ ರೋಗಕೆ ಸಜ್ಜನಸಂಘದ ಔಷಧಿ ಕೊಡಬೇಕು
ಕಲಿಪುರುಷನ ತಲೆಯೆಂಬ ಗೊಬ್ಬರವ ತುಳಿಯುತಲಿರಬೇಕು
ಕುಳಿತೆಡೆಯಲಿ ವರಭಕುತ ಪ್ರಸನ್ನನು ಕೊಡುವ ಮುಕುತಿ ದವಸ ॥ 3॥

-ಪ್ರಸನ್ನ ಸಾಹಿತ್ಯಸೌರಭ (ಪುಟ-209)

## ಶ್ರೀ ಆದಿರಾಜತೀರ್ಥರು 1364-1384

ಶ್ರೀ ಶ್ರೀಪಾದರಾಜ ಮಠದ ಯತಿಪರಂಪರೆಯಲ್ಲಿ6ನೇಯವರು
ಶ್ರೀಪರಶುರಾಮತೀರ್ಥರಿಂದ ಆಶ್ರಮ ಸ್ವೀಕಾರ
ಶ್ರೀಸತ್ಯವ್ರತತೀರ್ಥರಿಗೆ ಆಶ್ರಮ ನೀಡಿ ಶ್ರೀರಂಗದಲ್ಲಿ
ರಂಗನಾಯಕಿಯ ದೇವಸ್ಥಾನದಲ್ಲಿಯೇ ಬೃಂದಾವನಸ್ಥರಾದರು.
ಪುಷ್ಯ ಶುದ್ಧ ದಶಮಿ ಆರಾಧನೆ ದಿನ.

ಪ್ರಸನ್ನಕೂರ ಮಾಧವತೀರ್ಥರಿಗೆ
ನಮನ

# ಶ್ರೀಗಳವರ ಸಮಾಜ ಸೇವೆ

ತಮ್ಮ ಪೂರ್ವಾಶ್ರಮದಲ್ಲಿ ಜಿಲ್ಲೆಯ ಕುಡಿಯುವ ನೀರಿನ ಸಮಸ್ಯೆ ಹಾಗೂ ಅಭಿವೃದ್ಧಿಗೆ ಸಂಬಂಧಿಸಿದ ವಿವಿಧ ಹೋರಾಟಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.

1986ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯದ ಸೆನೆಟ್ ಸದಸ್ಯರಾಗಿ ಸೇವೆಸಲ್ಲಿಸಿದ ಸ್ವಾಮೀಜಿಯವರು, ಜಿಲ್ಲೆಗೆ ಕಾನೂನು ಕಾಲೇಜಿನ ಅವಶ್ಯಕತೆಯನ್ನು ಬೇಕೆಂದು ಮನಗಂಡು ವಿವಿ ಮತ್ತು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿ ಒತ್ತಡ ಹೇರಿದ್ದರು.

ಕೋಲಾರ ಜಿಲ್ಲೆಯ ಆಗು ಹೋಗುಗಳು ಮತ್ತು ಸಮಸ್ಯೆಗಳ ನಿವಾರಣೆ ಸೇರಿದಂತೆ ಪ್ರತಿಭಟನೆಗಳಲ್ಲಿ ಮುಂಚೂಣಿಯಲ್ಲಿ ಇರುತ್ತಿದ್ದ ಅವರು, ಜಿಲ್ಲೆ ಕಂಡ ಹಲವು ರಾಜಕೀಯ ತಿರುವುಗಳಲ್ಲಿ ಪ್ರಮುಖ ಪಾತ್ರ ವಹಿಸಿದ್ದರು.ಹಲವು ರಾಜಕೀಯ ವ್ಯಕ್ತಿಗಳಿಗೆ ಮಾರ್ಗದರ್ಶಕರಾಗಿಯೂ ಇದ್ದು , ಯಾವುದೇ ಪ್ರಭಾವಕ್ಕೆ ಸಿಲುಕದೇ ಇದ್ದರು.

ಕೋಲಾರ ಜಿಲ್ಲೆ ಕಂಡಂತಹ ಮಹಾನ್ ರೈತ ನಾಯಕ ದಿವಂಗತ ಸಿ. ಬೈರೇಗೌಡ ಅವರೊಂದಿಗೆ ಸಹ ಉತ್ತಮ ಒಡನಾಟ ಹೊಂದಿದ್ದ ನರಸಿಂಹ ಮೂರ್ತಿ ಅವರು, 1984ರಲ್ಲಿ ರಾಮಕೃಷ್ಣಹೆಗ್ಗಡೆ ಅವರ ಸರ್ಕಾರ ರಚನೆಯ ಪ್ರಯತ್ನದಲ್ಲಿ ಪಾಲ್ಗೊಂಡಿದ್ದಾರು.

ರಾಜಕೀಯ ಸನ್ನಿವೇಶಗಳಲ್ಲಿ ಯೋಗ್ಯತೆ ಮತ್ತು ವ್ಯಕ್ತಿಯ ವ್ಯಕ್ತಿತ್ವವನ್ನು ಗುರುತಿಸಿ ಹಲವಾರು ಮಂದಿ ಯುವ ರಾಜಕಾರಣಿಗಳನ್ನು ಪತ್ರಿಕೆಯ ಮೂಲಕ ಬೆಂಬಲಿಸಿ ಬೆಳೆಸಿದರು.

(ಕೋಲಾರ ವಾಣಿ ದಿನ ಪತ್ರಿ, ದಿನಾಂಕ 1-1-2011)
ಸಂಗ್ರಹ:- ಹಾವೇರಿ ವೇದವ್ಯಾಸಚಾರ್ಯ
ನಂ.ಡಿ-91, ಅಪ್ಪೂರಾವ್ ರಸ್ತೆ, ಎಂ.ಜಿ.ಕೆ. ಮೂರ್ತೀ ಲೇಔಟ್, ಸಮೀಪುರ, ಬೆಂಗಳೂರು-18

# ಶ್ರೀ ವಿದ್ಯಾಪ್ರಸನ್ನತೀರ್ಥರ ಜೀವನ ಚರಿತ್ರೆ

ಇವರ ಜನನ ಕ್ರಿ.ಶ. 1899, ಪೂರ್ವಾಶ್ರಮದ ಹೆಸರು **ತೆಕ್ಕಲೂರು ವೆಂಕಟನರಸಿಂಹಾಚಾರ್ಯ** ತಂದೆ ಪ್ರಖ್ಯಾತ ಸಂಸ್ಕೃತ ವಿದ್ವಾಂಸರಾದ ತೆಕ್ಕಲೂರು ಅಹೋಬಲಾಚಾರ್ಯ ತಾಯಿ ಸತ್ಯಭಾಮಮ್ಮ. 1906 ತೆಕ್ಕಲೂರು ಅಹೋಬಲಾಚಾರ್ಯರು ಶ್ರೀ ಶ್ರೀವಿದ್ಯಾರತ್ನಾಕರತೀರ್ಥರಾಗಿ ಶ್ರೀ ವ್ಯಾಸರಾಜಮಠದ 35ನೆಯ ಪೀಠಾಧಿಪತಿಗಳಾದರು.

ಚತುಃಶ್ಯಾಸ್ತ್ರ ಕೋವಿದನನ್ನಾಗಿ ಮಾಡುವ ಆಸೆಯಿಂದ ಅಹೋಬಲಾಚಾರ್ಯ ಇವರಿಗೆ ಸಂಸ್ಕೃತ ಭಾಷೆಯ ತಳಹದಿಯ ಶಿಕ್ಷಣ ವ್ಯವಸ್ಥೆಯನ್ನು ಮಾಡಿಸಿದರು ತಮ್ಮ ಮಗನು ಲಾಭದಾಯಕ ವೃತ್ತಿಗೆ ಅನುವಾಗುವ ವಿಶ್ವವಿದ್ಯಾಲಯ ಪದವಿಗಳಿಸಬೇಕೆಂಬ ಆಸೆಯಿಂದ, ಇವರ ತಾಯಿಯು ತಮ್ಮ ಸಂಬಂಧಿಯಾದ ಕೃಷ್ಣರಾಯರ ಹತ್ತಿರ ಕಳುಹಿಸಿದರು. ಲೋಯರ್ ಸೆಕೆಂಡರಿ ಪರೀಕ್ಷೆಯಲ್ಲಿ ಉತ್ತೀರ್ಣನಾದ ಸಮಯದಲ್ಲೇ ಶ್ರೀವಿದ್ಯಾರತ್ನಾಕರತೀರ್ಥರು ಬೃಂದಾವಸ್ಥರಾದರು. ನಂತರ ತಾಯಿ ಸತ್ಯಭಾಮಮ್ಮನವರ ಜೊತೆಗೆ ಬಂದು ಮೈಸೂರಿನಲ್ಲಿ ತಮ್ಮ ವಿದ್ಯಾಭ್ಯಾಸವನ್ನು ಮುಂದುವರೆಸಿದರು. ಮಹಾರಾಜರ ಪ್ರೌಢಶಾಲೆಯಲ್ಲಿ ಅಧ್ಯಯನವನ್ನು ಮುಗಿಸಿ ನಂತರ ಬೆಂಗಳೂರಿನ ಸೆಂಟ್ರಲ್ ಕಾಲೇಜನ್ನು ಸೇರಿದರು ಅಲ್ಲಿಂದ ಚೆನ್ನೈನಲ್ಲಿ ಬಿ.ಎಲ್. ಪದವಿಯನ್ನು ಪಡೆದರು.

ನಂತರ ಮೈಸೂರಿಗೆ ಹಿಂತಿರುಗಿ ವಕೀಲ ವೃತ್ತಿಯನ್ನು ಪ್ರಾರಂಭಿಸಿ, ಸಂಸ್ಥಾನದ ವ್ಯವಹಾರಗಳನ್ನು ವೆಂಕಟನರಸಿಂಹಾಚಾರ್ಯ ನೋಡಿಕೊಳ್ಳುತ್ತಿದ್ದರು. ತಮ್ಮ ಗುರುಪುತ್ರರಾದ ನರಸಿಂಹಾಚಾರ್ಯರೇ ತಮ್ಮ ಉತ್ತರಾಧಿಕಾರಿಗಳೆಂದು ಶ್ರೀ ವಿದ್ಯಾವಾರಿಧಿತೀರ್ಥರು ಮೊದಲೇ ಪ್ರಕಟಿಸಿದ್ದರು. ಆದ್ದರಿಂದ ಆಶ್ರಮಕ್ಕೆ ಅಗತ್ಯವಾದ ವಿದ್ವತ್ತನ್ನುಗಳಿಸಲು ನೆರೂರು ಕೃಷ್ಣಾಚಾರ್ಯರ ಹತ್ತಿರ ಅಧ್ಯಯನ ಮಾಡಿದರು.





# ಜಲಜನಾಭನ ಪೂಜೆ

**ಸುಲಭನೋ ಹರಿತನ್ನವರನರೆಗಳಿಗೆ ಬಿಟ್ಟಗಲನೋ ರಮಾಧವನೋಲಿಸಲರಿಯದೆ ಬಳಲುವರು ಪಾಮರರು ಭವದೊಳಗೆ** ಎಂಬ ಜಗನ್ನಾಥದಾಸರ ಹರಿದಾಸಸುಧೆಯೆಂದೇ ಪ್ರಖ್ಯಾತವಾದ ಹರಿಕಥಾಮೃತಸಾರದ ವ್ಯಾಖ್ಯಾನದಂತಿದೆ.

ಹರಿಪೂಜೆಯು ಬಹು ಸುಲಭ ಅರಿತವರಿಗೆ ಮಾತ್ರ, ಅವನನ್ನು ನಂಬಿ ಅವನೇ ಸಕಲವೂ ಎಂಬ ವಿಶ್ವಾಸದಿಂದ ಜೀವಿಸುವವರಿಗೆ ಹರಿಯು ಒಲಿವ ಎಂದು ವಿದ್ಯಾಪ್ರಸನ್ನತೀರ್ಥರು ತಿಳಿಸುತ್ತಾರೆ.

**ಅನ್ನಮಯ ಹರಿ** ಎಂಬ ಪದದಿಂದ ಪರಮಾತ್ಮನು ಎಲ್ಲ ಸ್ಥಳದಲ್ಲಿಯೂ ಸನ್ನಿಹಿತನಾಗಿದ್ದಾನೆ ಎಂದು ತಿಳಿಸಿದಂತಾಗುತ್ತದೆ. ಅಂದರೆ ಅನ್ನದಲ್ಲಿಯೂ ಪರಮಾತ್ಮನ ಸಾನ್ನಿಧ್ಯವಿದೆ ಎಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಅನ್ನವು ಸರ್ವರಿಗೂ ಜೀವನಾಧಾರವಾಗಿದೆ. ಆದ್ದರಿಂದ ಪರಮಾತ್ಮನನ್ನು ಅನ್ನವೆಂತಲೂ ಕರೆಯಬಹುದಾಗಿದೆ.

ಅನ್ನ ಶಬ್ದದಿಂದ ಕರೆಯಲ್ಪಡುವ ಹರಿಗೆ ನಾವು ಅರ್ಪಿಸುವ ಅನ್ನರೂಪ ನೈವೇದ್ಯವು ಕೇವಲ ಪ್ರದರ್ಶನ ಮಾತ್ರ. ಶ್ರೀಹರಿಗೆ ನಾವು ಅರ್ಪಿಸುವ ನೈವೇದ್ಯದಿಂದ ಯಾವ ವಿಕಾರವಾಗುವುದಿಲ್ಲ ಆದರೂ ನಮ್ಮ ಕೃತಜ್ಞತಾಪೂರ್ವಕ ಸಮರ್ಪಣೆಯನ್ನು ತೋರಲು ನಾವು ಅರ್ಪಿಸುತ್ತೇವೆ. ನಾವು ಅರ್ಪಿಸುವ ನೈವೇದ್ಯವು ಅವನಿಗೆ ನಿಷ್ಪ್ರಯೋಜಕವಾಗಿದ್ದಾಗ್ಯೂ ನಮ್ಮ ಗುಣಾವಗುಣಗಳನ್ನು ತುಲನೆ ಮಾಡಿ ಅನುಗ್ರಹಿಸುತ್ತಾನೆ ಎಂದು ಸ್ಪಷ್ಟವಾಗಿ ತಿಳಿಸಿದ್ದಾರೆ.

ಪರಮಾತ್ಮ ಪ್ರಸನ್ನನಾಗಬೇಕಾದರೆ ಭಕ್ತಿಯು ಮುಖ್ಯವಾದುದು. ತೋರಣಗಳು ನೃತ್ಯಗಳು ಬೇಕಿಲ್ಲ ನವರತ್ನ ಮಂಟಪವು ಬೇಕಿಲ್ಲ ಮುತ್ತು ಹವಳಕೂಡಿದ ಹಾರಗಳು ಬೇಕಿಲ್ಲ ಆದರೆ ಭಕ್ತಿಯಿಂದ ಒಂದು ತುಳಸಿದಳವನ್ನು ಅರ್ಪಿಸಿದರೂ ಸಾಕು.

**ಸುದರ್ಶನ ಹೆಚ್.ಎಲ್**
**ರಾಘವೇಂದ್ರಕಾಲೋನಿ, ಚಾಮರಾಜಪೇಟೆ, ಬೆಂಗಳೂರು-18**

## ಭಕುತಿಯಲಿ ತುಳಸಿದಳ ಅರ್ಪಣೆ

**ಜಲಜನಾಭನ ಪೂಜೆ ಅತಿ ಸುಲಭವು ॥ ಪ॥**

**ಚಲಿಸಿದ ಮನವನ್ನು ಪೊಂದಿರುವ ಸುಜನರಿಗೆ॥ ಅ.ಪ॥**

**ತಾಳ ಕೇಳುವನಲ್ಲ ಮೇಳ ಕೇಳುವನಲ್ಲ
ಬಾಳೆಮಾವುಗಳ ವೈಭವವ ಕೇಳುವನಲ್ಲ
ಸೂಳೆಯಂದದಿ ಬಹಳ ನಟನೆಗಳು ಬೇಕಿಲ್ಲ
ಬಾಲಕೃಷ್ಣನಲಿ ದೃಢಭಕುತಿಯುಳ್ಳವಗೆ ॥ 1॥**

**ನವರತ್ನ ಮಂಟಪದ ಝುವೆಯ ಬಯಸುವನಲ್ಲ
ಹವಳಗಳ ಸರದ ವೈಭವವು ಬೇಕಿಲ್ಲ
ಧವಳಮುಕ್ತಾಹಾರಗಳ ಬಯಸುವನಲ್ಲ
ಭುವನಭೂಷಣನೊಳತಿ ಭಕುತಿಯುಳ್ಳವಗೆ ॥ 2॥**

**ಹೊನ್ನಿನಾಭರಣಗಳನ್ನು ಬಯಸನು ವಿವಿಧ
ಅನ್ನಗಳ ರುಚಿಗೆ ಲೋಭವ ಪೊಂದನು
ಅನ್ನಾದಿಮಯ ಹರಿಯು ತನ್ನಲ್ಲಿ ತುಳಸೀದಳ
ವನ್ನು ಭಕುತಿಯೊಳಿಡೆ ಪ್ರಸನ್ನನಾಗುವನು ॥ 3॥**

-ಪ್ರಸನ್ನ ಸಾಹಿತ್ಯಸೌರಭ (ಪುಟ-182)

## ಮಾಹಿತಿ ಸಂಗ್ರಹ (Data Bank)

ಮಾಧ್ವಮಠಗಳಲ್ಲಿ ಹಾಗೂ ಮಾಧ್ವ ಸಂಸ್ಥೆಗಳಲ್ಲಿ ಕೆಳಕಂಡ ಹುದ್ದೆಗಳಿಗಾಗಿ **ರಂಗವಿಠಲ** ಕಾರ್ಯಾಲಯವು ಮಾಹಿತಿ ಸಂಗ್ರಹದ ಕಾರ್ಯದಲ್ಲಿ ತೊಡಗಿರುವುದರಿಂದ ಸತ್ಸಂಪ್ರದಾಯ ಹೊಂದಿದ ಮಾಧ್ವರು ಮಾತ್ರ ಅರ್ಜಿಯನ್ನು ಕಳುಹಿಸಬೇಕಾಗಿ ತಿಳಿಸಲಾಗಿದೆ. ಯುವಜನರಿಗೆ ವಿಶೇಷ ಬೇಡಿಕೆ ಇರುತ್ತದೆ.

ವಿದ್ವಾಂಸರು, ವೇದಪಾರಂಗತರು, ಉಪನ್ಯಾಸಕರು, ಅಧ್ಯಾಪಕರು, ಪುರೋಹಿತರು (ತ್ರಿಮತಸ್ಥರು), ಅರ್ಚಕರು, ನುರಿತ ಅಡಿಗೆಯವರು, ಆಫೀಸ್ ಮ್ಯಾನೇಜರ್, ಡಿ.ಟಿ.ಪಿ , Proof Readers, ಲೆಕ್ಕ ಪರಿಶೋಧಕರು (Accountant)

ಉದ್ಯೋಗಾವಕಾಶವನ್ನು ಒದಗಿಸಲು ಹಾಗೂ ಸಂಸ್ಥೆಗಳಿಗೆ ನೆರವಾಗಲು **ರಂಗವಿಠಲ** ಹಮ್ಮಿಕೊಂಡಿರುವ ಮಾಹಿತಿ ಸಂಗ್ರಹ ಯೋಜನೆ.

ವಿವರಗಳೊಂದಿಗೆ ಕೂಡಲೇ ಸಂಪರ್ಕಿಸಿ :
**ರಂಗವಿಠಲ ಕಾರ್ಯಾಲಯ**
ನಂ. 58, ರಾಘವೇಂದ್ರ ಕಾಲೋನಿ, ಚಾಮರಾಜಪೇಟೆ, ಬೆಂಗಳೂರು-18
ದೂರವಾಣಿ 080-26914637.rangavittala.sripada@gmail.com





1935ರಲ್ಲಿ ಶ್ರೀ ವಿದ್ಯಾವಾರಿಧಿತೀರ್ಥರ ಆರೋಗ್ಯ ಪರಿಸ್ಥಿತಿ ವಿಷಮ ಗೊಂಡಿತು, ಆಗ ವೆಂಕಟನರಸಿಂಹಾಚಾರ್ಯರು ಸಂನ್ಯಾಸಾಶ್ರಮವನ್ನು ಸ್ವೀಕರಿಸಿ ಶ್ರೀ ಶ್ರೀವಿದ್ಯಾಪ್ರಸನ್ನತೀರ್ಥರೆಂದಾದರು. ನಂತರದ ದಿನಗಳಲ್ಲಿ ಶ್ರೀವಿದ್ಯಾವಾರಿಧಿತೀರ್ಥರ ಆರೋಗ್ಯ ಸುಧಾರಿಸಿದುದರಿಂದ ಶ್ರೀ ವಿದ್ಯಾಪ್ರಸನ್ನತೀರ್ಥರು ಅಧ್ಯಯನ ಚಿಂತನ, ಜಪ, ತಪಾದಿಗಳಲ್ಲಿ ಮುಳುಗಿದರು. ಸಾಹಿತ್ಯದಲ್ಲಿ ಆಸಕ್ತಿಯನ್ನು ಹೊಂದಿದ್ದ ತೀರ್ಥರು ಗೀತೆಗಳನ್ನು ಬರೆಯಲು ಪ್ರಾರಂಭಿಸಿದರು. ಹಾಗೂ ತಾವೇ ಹಾಡಿ ಇತರರಿಗೆ ಕಲಿಸುತ್ತಿದ್ದರು.

ಗುರುಗಳು, ದೇವತೆಗಳ ತಾರತಮ್ಯ, ಸರಸ್ವತೀ ದೇವಿ, ಲಕ್ಷ್ಮೀದೇವಿ, ವೆಂಕಟೇಶದೇವರು, ವೇದವ್ಯಾಸದೇವರು, ಶ್ರೀಕೃಷ್ಣನಬಾಲಲೀಲೆಗಳು, ಹಾಗೂ ರಾಮದೇವರ ಬಗ್ಗೆ ಕೃತಿಗಳನ್ನು ರಚಿಸಿದ್ದಾರೆ. ಅವರು ರಚಿಸಿದ ಕೀರ್ತನೆಯಾದ **ಜಯ ಜಯ ವೈಷ್ಣವ ಪಯನಿಧಿಚಂದ್ರಗೆ। ಜಯಜಯ ವ್ಯಾಸಯತೀಂದ್ರರಿಗೆ॥** ಇದನ್ನು ಈಗಲೂ ದರ್ಬಾರಿನ ಕಾಲದಲ್ಲಿ ಹಾಡಲಾಗುತ್ತಿದೆ. 34 ವರ್ಷ ಪೀಠದಲ್ಲಿದ್ದ ವಿದ್ಯಾಪ್ರಸನ್ನರು, ಅಖಿಲ ಭಾರತ ಮಾಧ್ವಮಹಾಮಂಡಲಿಯನ್ನು ಸ್ಥಾಪಿಸಲು ಪ್ರೇರಕರಾಗಿದ್ದರು. ಬಡ ಬ್ರಾಹ್ಮಣ ವಿದ್ಯಾರ್ಥಿಗಳ ಸಹಾಯಕ್ಕಾಗಿ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಿದರು. 1969ರಲ್ಲಿ ದೀರ್ಘಕಾಲ ಅನಾರೋಗ್ಯದಿಂದ ಬಳಲುತ್ತಿದ್ದ ಶ್ರೀವಿದ್ಯಾಪ್ರಸನ್ನತೀರ್ಥರು ಶ್ರೀಮೂಲಗೋಪಾಲಕೃಷ್ಣನ ಪಾದಾರವಿಂದವನ್ನು ಸೇರಿದರು.

**ಬದರೀನಾಥ**
**ರಾಘವೇಂದ್ರಕಾಲೋನಿ, ಚಾಮರಾಜಪೇಟೆ, ಬೆಂಗಳೂರು-18**

### ಶ್ರೀ ಗುಣಸಾರನಿಧಿತೀರ್ಥರು 1804-1813

ಶ್ರೀ ಶ್ರೀಪಾದರಾಜ ಮಠದ ಯತಿಪರಂಪರೆಯಲ್ಲಿ 25ನೇಯವರು
ಶ್ರೀ ಗುಣನಿಧಿತೀರ್ಥರಿಂದ ಆಶ್ರಮ ಸ್ವೀಕಾರ
ಶ್ರೀ ಪ್ರಾಜ್ಞನಿಧಿತೀರ್ಥರಿಗೆ ಆಶ್ರಮ ನೀಡಿ ಮುಳಬಾಗಿಲಿನ ನರಸಿಂಹತೀರ್ಥದಲ್ಲಿ ಬೃಂದಾವನಸ್ಥರಾದರು.
ಪುಷ್ಯ ಶುದ್ಧ ದಶಮಿ ಆರಾಧನೆ ದಿನ.

ವಿದ್ಯಾಪ್ರಸನ್ನತೀರ್ಥರ
ಕೃತಿಗಳ ಬಗ್ಗೆ

## ಸಮಧ್ವ ವಿಜಯ ಹಾಗೂ ವಿದ್ಯಾಪ್ರಸನ್ನತೀರ್ಥರ ಕೃತಿ

ಪೂಜ್ಯ ಶ್ರೀ ವಿದ್ಯಾಪ್ರಸನ್ನತೀರ್ಥರು ರಚಿಸಿದ **ಬರುತಿಹರು ನೋಡಿ ಗುರುವರೇಣ್ಯ ಸುಖತೀರ್ಥ ಯತಿವರರು** ಎಂಬ ಕೃತಿಯಲ್ಲಿ ಸುಮಧ್ವವಿಜಯ ಮಹಾಕಾವ್ಯದಲ್ಲಿ ಬರುವ ತ್ರಯೋದಶ ಸರ್ಗದಲ್ಲಿ ಉಲ್ಲೇಖಿಸಿರುವ ಹಲವು ಚರಿತ್ರೆಗಳನ್ನು ಇಲ್ಲಿ ಕಾಣಬಹುದು.

**ಸು.ವಿ.ಕೃತಿ ಯತಯೋ ಗೃಹಿಣೋಽಥವರ್ಣಿಮುಖ್ಯಾಃ
ಶ್ರುತಿಗಾಸ್ತ್ಯಕ್ತ ನಿಷಿದ್ಧಕಾಮ್ಯಭಾವಾಃ ।
ಇಹ ಮೂರ್ತಿಧರಾ ಇವ ಸ್ವಧರ್ಮಾಃ
ಶತಸಂಖ್ಯಾಃ ಶತಸಂಖ್ಯಮನ್ವಗಚ್ಛನ್ ॥ 19॥**

**ವಿ.ಪ್ರ ಕೃತಿ ಯತಿಗಳು ಗೃಹಿಗಳು ಬ್ರಹ್ಮಚಾರಿಗಳು । ಶತಶತ ಸಂಖ್ಯೆಗಳಲಿ ಸೇರಿಹರು ।
ಅತಿಸಂಭ್ರಮದಲಿ ನೋಡಲು ಪೂರುಷ । ರತನವು ಮಾರ್ಗದ ಖತಿ ಪರಿಹರಿಸುತ॥ 2॥**

**ಸು.ವಿ.ಕೃತಿ ನಖನಿರ್ಜಿತಪದ್ಮರಾಗರಾಗಂ
ವರಕೂರ್ಮಪ್ರಪದಂ ನಿಗೂಢಗುಲ್ಫಮ್ ।
ಸುರವರ್ಯಕರಾಗ್ರಸೇವ್ಯಜಂಘಂ
ದ್ವಿರದೋದಾರಕರೋಪಮೋರುಯುಗ್ಮಮ್ ॥ 29॥**

**ವಿ.ಪ್ರ ಕೃತಿ ಪದುಮರಾಗಕಾಂತಿಯ ಮೀರಿದ ನಖ। ಹೃದಯಂಗಮ ವರಕೂರ್ಮಪ್ರಪದಗಳು ।
ವಿಧಿಭವಮುಖ ಸುರಸೇವಿತ ಜಂಘವು। ಮದಗಜಕರವನು ಪೋಲುವ ತೊಡೆಗಳು ॥ 6 ॥**

**ಸು.ವಿ.ಕೃತಿ ಶುಭಶುದ್ಧನಿತಂಬಬಿಂಬರಾಜನ್-
ನವಕೌಶೇಯವಿಶೇಷಬಾಹ್ಯವಸ್ತ್ರಮ್ ।
ತನುಕುಕ್ಷಿಗಲಾಳಿಕೇಷು ರೇಖಾ-
ತ್ರಿತಯೇನ ಪ್ರಕಟೇನ ಶೋಭಮಾನಮ್ ॥ 30॥**

**ವಿ.ಪ್ರ ಕೃತಿ ಪುಷ್ಪನಿತಂಬಗಳಲಿ ಪೊಳೆಯುತಲಿಹ। ರೇಷ್ಮೆಯ ವಸ್ತ್ರವ ಧರಿಸಿಹರು ।
ಕುಕ್ಷಿಲಲಾಟ ಶಿರೋಧರಗಳಲತಿ । ಶ್ರೇಷ್ಠದ ತ್ರಿವಳಿಗಳಿಂದ ರಾಜಿಸುತ ॥ 7॥**

ಇದೇ ರೀತಿ ಮುಂದಿನ ಹಲವಾರು ಶ್ಲೋಕಗಳ ವ್ಯಾಖ್ಯಾನವೋ ಎಂಬಂತಿದೆ ಶ್ರೀಪೂಜ್ಯರ ಮೇಲಿನ ಕೃತಿಯು. **ನಿನ್ನ ಭಕ್ತರ ಯೋಗ್ಯತೆ ನೀನೇ ಬಲ್ಲೆಯೋ ಅನ್ಯರು ಬಲ್ಲರೇ ವಿಜಯವಿಠ್ಠಲರೇಯ** ಎಂಬ ವಿಜಯರಾಯರ ಮಾತಿನಂತೆ ಜ್ಞಾನಿಗಳ ಮಾತನ್ನು ಜ್ಞಾನಿಗಳೇ ಬಲ್ಲರು ನಮ್ಮಂಥ ಪಾಮರರು ವರ್ಣಿಸಲಸಾಧ್ಯ.

**✍ಕಿಶನ್‌ರಾವು ಜಾಲಿಹಾಳ್**
**4-4-223/59, ಸತ್ಯನಾಥಕಾಲೋನಿ, ರಾಯಚೂರು.**



ವಿದ್ಯಾಪ್ರಸನ್ನತೀರ್ಥರ
ಕೃತಿಗಳ ಬಗ್ಗೆ

## ಕವಳತಾಯಿ ಕವಳ ಅಮ್ಮ

ಶ್ರೀಹರಿಯ ಅನುಗ್ರಹ ಪ್ರಸಾದಗಳೆಲ್ಲವೂ ನೇರವಾಗಿ ಪರಮಾತ್ಮನಿಂದ ಪಡೆಯುವುದು ಸಾಧ್ಯವಿಲ್ಲ. ಪರಮಾತ್ಮನ ಅನುಗ್ರಹವು ಬೇಕಾಗಿದ್ದಲ್ಲಿ ಪರಂಪರಾ ಮೂಲಕವೇ ಪಡೆಯಬೇಕು. ಈ ಪರಂಪರಾ ವ್ಯವಸ್ಥೆಯು ತಾರತಮ್ಯ ಯುಕ್ತವಾಗಿದೆ. ಈ ಒಂದು ಪರಮಾತ್ಮನ ವ್ಯವಸ್ಥೆಯಲ್ಲಿ ಮಹಾಲಕ್ಷ್ಮಿಯು ಪರಮಾತ್ಮನ ನಂತರ ಪ್ರಥಮ ಸ್ಥಾನವನ್ನು ಹೊಂದಿದ್ದಾಳೆ. ಮಹಾಲಕ್ಷ್ಮಿಯು ಪರಮಾತ್ಮನ ಅಪ್ಪಣೆಯ ಮೇರೆಗೆ ಕಾರ್ಯವನ್ನು ನಡೆಸುವವಳು. ಆದರೆ ಮಹಾಲಕ್ಷ್ಮಿಯನ್ನೂ ನೇರವಾಗಿ ಪ್ರಾರ್ಥಿಸುವಂತಿಲ್ಲ. ಗುರುಗಳ ದ್ವಾರವೇ ಎಲ್ಲಾಕಾರ್ಯವೂ ನಡೆಯಬೇಕು. ಈ ಸಂಕೋಲೆಗಳೆಲ್ಲವನ್ನೂ ಮೀರಿದವ ಪರಮಾತ್ಮನೊಬ್ಬನೆ.

ಆದ್ದರಿಂದ ದಾಸರು ಮಹಾಲಕ್ಷ್ಮಿಯಲ್ಲಿ ಭಿಕ್ಷೆ ಬೇಡುತ್ತಾರೆ. **ಕವಳತಾಯಿ ಕವಳ ಅಮ್ಮ** ಎಂಬುದರಿಂದ ಪ್ರಸಾದದ ಮಹತ್ವವನ್ನು ತಿಳಿಸುತ್ತಾರೆ.

ಪ್ರಪಂಚದಲ್ಲಿ ನಡೆಯುತ್ತಿರುವ ರೀತಿ ನೀತಿಗಳನ್ನು ದಾಸರು ಸ್ಪಷ್ಟವಾಗಿ ತಿಳಿಸುತ್ತಾ, ಮಹಾಲಕ್ಷ್ಮಿಯು ಪರಮಾತ್ಮನ ಎಂಜಲನ್ನು ಉಣ್ಣುತ್ತಾಳೆ. ಮಹಾಲಕ್ಷ್ಮಿ ಉಂಡ ಎಂಜಲಿನ ಭಾಗವನ್ನು ನೀಡೆಂದು ಬೇಡಿಕೊಳ್ಳುತ್ತಾರೆ. ಮಹಾಲಕ್ಷ್ಮಿಯ ಹಸ್ತದ ಅನ್ನವು ಅಮೃತವಾಗುತ್ತದೆ ಎಂದು ಧೃಡವಿಶ್ವಾಸದಿಂದ ನುಡಿಯುತ್ತಾರೆ.

ಸಂಸಾರದಲ್ಲಿ ಒಬ್ಬ ದುಡಿದು ಹತ್ತಾರು ಜನಗಳು ಕೂತು ಉಣ್ಣುತ್ತಾರೆ ಮಹಾಲಕ್ಷ್ಮಿಯು ಧನ ದಾನ್ಯ ಸಂಪತ್ತಿನಿಂದ ಕೂಡಿರುವವಳು, ಪಾಮರರನ್ನು ಪರಮಾತ್ಮನ ಪ್ರಸಾದದಿಂದ ಉದ್ಧರಿಸೆಂದು ಕಳಕಳಿಯ ಪ್ರಾರ್ಥನೆ ಗೈಯ್ಯುತ್ತಾರೆ.

ಈ ಕೀರ್ತನೆಯ ಒಟ್ಟು ತಾತ್ಪರ್ಯ ಸುಜೀವಿಗಳಿಗೆ ಹರಿಯ ಪ್ರಸಾದವು ನೇರವಾಗಿ ದೊರೆಯದೆ ಶ್ರೀಲಕ್ಷ್ಮಿಯ ದ್ವಾರ ಮಾತ್ರ ದೊರೆಯುವುದೆಂದು ತಿಳಿಸುತ್ತಾರೆ.

**✍ಭಕ್ತರಹಳ್ಳಿ ರಾಘವೇಂದ್ರರಾವ್**
**ನಂ. 1249, 2ನೇ ಹಂತ, 10ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು-86**

ವಿದ್ಯಾಪ್ರಸನ್ನತೀರ್ಥರ
ಕೃತಿಗಳ ಬಗ್ಗೆ

## ಪರಮಾತ್ಮನ ಪ್ರಸಾದ

ಕವಳತಾಯಿ ಕವಳ ಅಮ್ಮ ॥ ಪ॥

ಪಾಪಿ ಪರದೇಶಿಯ ಮರಿಬೇಡಿರಮ್ಮ ॥ ಅ.ಪ॥

ಸಂಜೆಯ ಕವಳಕ್ಕೆ ಸಾವಿರ ಆಪತ್ತು
ಅಂಜಿ ಓಡುವುದೆಂದು ಕೇಳಿಲ್ಲವೇನಮ್ಮ
ಭುಂಜಿಸಿ ನಿಮ್ಮಯ ಪತಿಯ ಪ್ರಸಾದದ
ಎಂಜಲು ಎನಗಿಷ್ಟು ಜೋಳಿಗೆಗಿಕ್ರವ್ವ ॥ 1॥

ನಮದೊಂದು ಸಂಸಾರ ಬಲು ದೊಡ್ಡದವ್ವ
ಶ್ರಮಿಸುವರದರೊಳಗೊಬ್ಬರಿಲ್ಲವ್ವ
ಕಮಲವ್ವ ನಿಮ್ಮಯ ಅಮೃತಹಸ್ತದ ಕವಳ
ಎಮಗೊಂದು ಕ್ಷಣದಲಿ ಅಮೃತವಾಗೋದವ್ವ ॥ 2॥

ಮಿತಿಯಿಲ್ಲದೈಶ್ವರ್ಯ ನಿಮಗಿಹುದೆಂದು
ಕ್ಷಿತಿಯೊಳು ಜ್ಞಾನಿಗಳಾಡುತಲಿಹರು
ಅತುಲ ಮಹಿಮ ನಿಮ್ಮ ಪತಿಯ ಪ್ರಸಾದವ
ಪ್ರತಿದಿನವಿತ್ತು ಪ್ರಸನ್ನರಾಗಿರವ್ವ ॥ 3॥

-ಪ್ರಸನ್ನ ಸಾಹಿತ್ಯಸೌರಭ (ಪುಟ-33-34)


ಶ್ರೀ ವಿಜಯದಾಸರ ಶ್ರೀಕ್ಷೇತ್ರ ಚಿಪ್ಪ ಗಿರಿಯಲ್ಲಿ ಹರಿದಾಸಬಂಧುಗಳು ನಡೆಸುವ ಎಲ್ಲಾ ಸೇವಾ ಕಾರ್ಯಕ್ರಮಗಳಿಗೆ ತುಂಬು ಹೃದಯದ ಸ್ವಾಗತವಿರುತ್ತದೆ. ಇದು ಮಹೋನ್ನತ ಕ್ಷೇತ್ರ. ಎಲ್ಲಾ ಹರಿದಾಸರ ಸನ್ನಿಧಾನವಿರುವ ಪವಿತ್ರ ತಾಣವಿದು. ತಮ್ಮ ಯಾವುದೇ ಸೇವಾ ಕಾರ್ಯಗಳಿಗೆ ಈ ಕೆಳಕಂಡ ವಿಳಾಸಕ್ಕೆ ಸಂಪರ್ಕಿಸಬಹುದು.

ಶ್ರೀ ಮೋಹನದಾಸರ ವಂಶಸ್ಥರಾದ
**ಶ್ರೀ ಸಿ.ಎಚ್. ಜಗನ್ನಾಥದಾಸರು, ವಿಜಯದಾಸರ ಕಟ್ಟೆ ,**
**ಚಿಪ್ಪಗಿರಿ-518396 ಆಲೂರು (ತಾ.) ಕರ್ನೂಲು (ಜಿ),**
**ದೂರವಾಣಿ ಸಂಖ್ಯೆ : 09396506500, 09849266419, 09701894189**

ಸೇವೆಯನ್ನು ಸಲ್ಲಿಸಲಿಚ್ಛಿಸುವ ಭಕ್ತಾದಿಗಳು
Syndicate Bank, Chippagiri Branch,
S.B. A/C No. 338722013830 ಗೆ ಕಳುಹಿಸಬಹುದು.




ಹರಿದಾಸ-ಯತಿ ಶ್ರೀವಿದ್ಯಾಪ್ರಸನ್ನರು
ಸಂದರ್ಶನ

## ವಿಜ್ಞಾನ-ಆಧ್ಯಾತ್ಮ ಸಮ್ಮಿಲನ; ಶ್ರೀ ವಿದ್ಯಾಪ್ರಸನ್ನರು

**ಹಾಗೊಮ್ಮೆ ಶ್ರೀ ಶ್ರೀ ವಿದ್ಯಾಪ್ರಸನ್ನತೀರ್ಥ ಶ್ರೀಪಾದರು ಇಂದಿಗೂ ನಮ್ಮೊಡನೆ ಇದ್ದಿದ್ದರೆ ಅವರಿಗೆ 106 ವರ್ಷ ವಯಸ್ಸಾಗುತ್ತಿತ್ತು. ಶ್ರೀಪಾದರೊಂದಿಗೆ ಬದುಕಿ ಬಾಳಿದ ನಾಡಿನ ಖ್ಯಾತ ಇಂಗ್ಲೀಷ ಭಾಷಾ ತಜ್ಞ ಪ್ರೊ॥ ಆರ್. ಗುರುರಾಜರಾಯರು ಇಂದು ನಮ್ಮೊಂದಿಗೆ ಇದ್ದಾರೆ. ಇವರಿಗೆ 94 ವರ್ಷ. ಮೈಸೂರು ವಿಶ್ವವಿದ್ಯಾಲಯದ ಇಂಗ್ಲೀಷ್ ಪ್ರೊಫೆಸರರಾಗಿ ಸೇವೆ ಸಲ್ಲಿಸಿದ ಪ್ರೊ॥ ರಾಯರು, ಶ್ರೀವ್ಯಾಸರಾಜ ವಿದ್ಯಾಸಿಂಹಾಸನದ ಕಿಂಕರರು. ಇಂದಿಗೂ ಲವಲವಿಕೆ-ಉತ್ಸಾಹಗಳಿಂದ ತಾವು ದಾಸಸಾಹಿತ್ಯ ವಿದ್ಯಾರ್ಥಿ ಎಂದು ಪರಿಚಯಿಸಿಕೊಳ್ಳುವ ಪ್ರೊ॥ ಗುರುರಾಜರಾಯರೊಂದಿಗೆ ನಡೆಸಿದ ಸಂದರ್ಶನ ಹೀಗಿದೆ.**

*ಪ್ರಶ್ನೆ: ಯತಿ ಮತ್ತು ಹರಿದಾಸರಾಗುವ ಮುನ್ನ ಶ್ರೀವಿದ್ಯಾಪ್ರಸನ್ನತೀರ್ಥ ಶ್ರೀಪಾದರ ಚಿಂತನೆಗಳು ಹೇಗಿದ್ದವು?*

**ಪ್ರೊ॥ ಆರ್. ಗುರುರಾಜರಾವ್:** ಶ್ರೀವಿದ್ಯಾಪ್ರಸನ್ನರು ಯತಿಗಳಾದದ್ದು ತಮ್ಮ 35ನೆಯ ವಯಸ್ಸಿನಲ್ಲಿ. ಅಂದಿನ ಮೈಸೂರು ಪ್ರಾಂತ್ಯದ ಪ್ರಖ್ಯಾತ ನ್ಯಾಯವಾದಿಗಳಾಗಿದ್ದ ಇವರು ಮುಂದಿನ 35 ವರ್ಷ ಕಾಲ ಯತಿಗಳಾಗಿ ಸಮಾಜಸೇವೆ ಮಾಡಿದುದು ಹರಿಚಿತ್ತ.

ಮೂಲತಃ ಇವರು ವಿಚಾರಶೀಲರು. ಉತ್ತಮವಾಗ್ಮಿ. ಸಮರ್ಥ ಸಂಘಟಕರು. ದಾರ್ಶನಿಕ ಚಿಂತಕರು. ವಿಶ್ವಕುಟುಂಬಿ. ತುಂಬು ತುಳುಕುವ ಸಮಾಜಸೇವಾ ಉತ್ಸಾಹ ಇವರಿಗಿತ್ತು. ಪ್ರಗತಿಗಾಮಿ ಚಿಂತನೆಗಳತ್ತ ಒಲುವು ತುಂಬಿಕೊಂಡವರು. ಇಂತಹ ತುಂಬು ಜವ್ವನದ ವ್ಯಕ್ತಿ ಸನ್ಯಾಸಾಶ್ರಮ ಸ್ವೀಕರಿಸಿದುದು ಭಗವಂತನ ಇಚ್ಛೆಯೇ.

ತಮ್ಮ ಚೇತನ-ಚಿಂತನಗಳನ್ನು ಹರಿದಾಸ ಸಾಹಿತ್ಯ ರಚನೆಗೆ ಮುಡುಪಾಗಿಟ್ಟ ಇವರ ದೃಢ ನಿರ್ಧಾರ ಆದರಣೀಯ. ಮೊದಮೊದಲು ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಹೊರಹೊಮ್ಮಿದ ಇವರ ದಾಸಸಾಹಿತ್ಯ ಕೃತಿಗಳು ಬರುಬರುತ್ತಾ ಜೀವನದ ಎಲ್ಲ ಪ್ರಾಕಾರಗಳನ್ನು ಸುಲಭವಾಗಿ ಮೈಗೂಡಿಸಿಕೊಂಡದ್ದು ನಮ್ಮ ಸೌಭಾಗ್ಯ.

**ಹರಿದಾಸ-ಯತಿ ಶ್ರೀವಿದ್ಯಾಪ್ರಸನ್ನರು**
**ಸಂದರ್ಶನ**

***ಪ್ರಶ್ನೆ: ದಾಸಸಾಹಿತ್ಯಕ್ಕೆ ಇವರಿತ್ತ ವಿಶೇಷ ಕೊಡುಗೆ ಏನು?***

**ಪ್ರೊ॥ ಗುರುರಾಜಾರಾವ್:** ನಮ್ಮ ದೇವರನಾಮಗಳು ಸಹ ವಿಚಾರ ಪ್ರಚೋದಕವಾಗಿರಬೇಕು; ಸ್ಫೂರ್ತಿ ತುಂಬುವಂತಿರಬೇಕು. -ಈ ಮಾತನ್ನು ನೂರೆಂಟು ಬಾರಿ ಹೇಳಿ ಕೃತಿಯಲ್ಲಿ ತೋರಿದ ಸೃಜನಶೀಲರು **ವಿದ್ಯಾಪ್ರಸನ್ನರು.** ಪ್ರತಿ ಕೀರ್ತನೆ, ಸ್ತೋತ್ರ ಇಲ್ಲವೇ ಹಾಡಿನಲ್ಲಿ ಯಾವುದಾದರೊಂದು ಸಂದೇಶವಿರಲೇಬೇಕು ಎನ್ನುವ ನಿಷ್ಠಾಪೂರ್ಣ ಬರಹ ಇವರದು. ಸರಳ ಭಾಷೆಯಲ್ಲಿ ಮಾತ್ರ ಸಾಮಾನ್ಯರನ್ನು ತಲುಪಲು ಸಾಧ್ಯ ಎನ್ನುವ ಔದಾರ್ಯ ಇವರ ಕೃತಿಯ ಸಾರ ಎನ್ನಬಹುದು.

ಭಗವಂತನೊಡನೆ ನೇರಮಾತುಕತೆ ನಡೆಸಿ ಎಂದು ಹೇಳಿಕೊಟ್ಟ ದಾಸರು ಇವರು. **ವಾಸುದೇವ ನಿನ್ನ ದಾಸನಾಗುವ ಆಸೆಯೋ ಎನಗೆ** ಎನ್ನುವ ಮೂಲಕ ಸಾಮಾನ್ಯ ಭಕ್ತನ ಮನೋಭೂಮಿಕೆಯನ್ನು ವರ್ಣಿಸಿದವರು ಇವರು. **ಜಗವನುದ್ಧರಿಸಿದ ಸುಂದರ ನಿನ್ನ ಮೊಗ ನೋಡಲು ನಮಗೆಲ್ಲ ಸಂಭ್ರಮವೋ** ಎನ್ನುವ ಇವರ ಮಾತು ದಾಸಸಾಹಿತ್ಯದ ಮುಕ್ತಾಫಲಗಳು.

***ಪ್ರಶ್ನೆ: ವಿಶ್ವಸಾಹಿತ್ಯದ ಕಂಪನ್ನು ದಾಸಸಾಹಿತ್ಯಕ್ಕೆ ತುಂಬಿದ ಇವರ ಪ್ರಯತ್ನಗಳು ಯಥೋಚಿತವೇ?***

**ಪ್ರೊ॥ ಗುರುರಾಜಾರಾವ್:** ಮನುಷ್ಯನ ಭಾವನೆಗಳು ವಿಶ್ವದ ಯಾವುದೇ ಭಾಗದಲ್ಲಿದ್ದರೂ ಒಂದೇ ಎನ್ನುವ ಸಂವೇದನೆ ಇವರ ಕೃತಿಗಳ ಮತ್ತೊಂದು ವೈಶಿಷ್ಟ್ಯತೆ. ಪಾಶ್ಚಾತ್ಯ, ಪೌರಾತ್ಯ ಧರ್ಮ ಸಾಹಿತ್ಯಕುರಿತ ಪಾಂಡಿತ್ಯ ಇವರಲ್ಲಿದ್ದಂತೆಯೇ ಆಗಮ, ನಿಗಮ, ಪುರಾಣ, ಮಹಾಕಾವ್ಯಗಳ ಮೂಲ ಸಂದೇಶಗಳ ಪೂರ್ಣ ಪರಿಜ್ಞಾನ ಇವರಿಗಿತ್ತು.

ವಿಶ್ವದ ಶ್ರೇಷ್ಠ ಕವಿ ಜಾನ್ ನ್ಯೂಮನ್ನನು ಬರೆದ Lead kindly light ಕವಿತೆಯನ್ನು ಇಡೀ ಪ್ರಪಂಚವೇ ಧನ್ಯತೆಯಿಂದ ಸ್ಮರಿಸುತ್ತದೆ. ಕನ್ನಡ ಮಣ್ಣಿನಲ್ಲಿ ಇದೇ ಚಿಂತನೆಯ ಪ್ರತಿಕೃತಿಯನ್ನು ಶ್ರೀವಿದ್ಯಾಪ್ರಸನ್ನರು ಪಡಿಮೂಡಿಸಿದ್ದಾರೆ. **ತೋರಿಸಯ್ಯ ಬೆಳಕು, ದೇವತೋರಿಸಯ್ಯಾ ಬೆಳಕು** ಎನ್ನುವ ಇವರ ದೇವರನಾಮ ವಿಶ್ವಸಾಹಿತ್ಯದಿಂದ ದಾಸಸಾಹಿತ್ಯಕ್ಕೆ ಹರಿದು ಬಂದ ಜ್ಞಾನಾಮೃತ.



**ವಿದ್ಯಾಪ್ರಸನ್ನತೀರ್ಥರ**
**ಕೃತಿಗಳ ಬಗ್ಗೆ**

# ಹೂ ಬೇಕೇ ಹೂವು ಪರಿಮಳದ ಹೂವು

ಶ್ರೀ ವ್ಯಾಸರಾಜ ಮಠದ (ಸೋಸಲೆ) ಶ್ರೀ ಮದ್ವಿದ್ಯಾಪ್ರಸನ್ನತೀರ್ಥರ ರಚನೆಗಳಲ್ಲಿ ಶ್ರೀ ಹರಿ-ಗುರು ಭಕುತಿಯ ವಿಶೇಷತೆಯನ್ನು ಕಾಣುತ್ತೇವೆ.

ಭಕುತರಿಗೆ ; **ಹೂ ಬೇಕೇ ಹೂವು,** ಅವು ಪರಿಮಳದ ಹೂ, ಶ್ರೀಕೃಷ್ಣನ ತೋಟದ ಹೂ ಎಂದು ಹೇಳುವುದರಿಂದ ಶ್ರೀಹರಿಯು ಸರ್ವೋತ್ತಮ, ಸರ್ವವ್ಯಾಪಿ, ಸಕಲ ಲೋಕಗಳೆಲ್ಲವೂ ಶ್ರೀಹರಿಯ ವಾಸಸ್ಥಾನವೇ, ಶ್ರೀಹರಿಯು ಇಲ್ಲದ ಸ್ಥಾನವೇ ಇಲ್ಲ ಎಂಬ ಹರಿಸರ್ವೋತ್ತಮತ್ವದ ಸಂದೇಶವನ್ನು ಅರುಹುತ್ತಾರೆ. ವಿವಿಧ ಹೂಗಳು ಅಂದರೆ- ಮಲ್ಲಿಗೆ, ಸಂಪಿಗೆ, ಜಾಜಿ, ಸೇವಂತಿಗೆ, ಯಾವುದೇ ಆಗಿರಬಹುದು ಅವೆಲ್ಲಾ ನಮ್ಮ ಮನಃ ಕ್ಲೇಶವನ್ನು ಕಳೆಯುತ್ತವೆ, ಏಕೆಂದರೆ ಅವು ಶ್ರೀಹರಿಯ ಸೇವೆಯನ್ನು ಗೈಯ್ದಂಥ ಪುನೀತ ಹೂಗಳು.

ಮುಂದಿನ ನುಡಿಯಲ್ಲಿ, ಆ ಹೂವನ್ನು ದಾರದಲ್ಲಿ ಕಟ್ಟಿಲ್ಲ, ಗೇಣು, ಮಾರು ಎಂದು ಅಳೆಯುವುದಿಲ್ಲ ಕೇರಿ, ಕೇರಿ (ಓಣಿ, ಗಲ್ಲಿ)ಗಳಲ್ಲಿ ಮಾರಲಾಗುವುದಿಲ್ಲ... ಅಂದರೆ ಮತ್ತೆ ಅದರ ವಿಶೇಷತೆ ಏನು? ಹೇಗೆ ಅದನ್ನು ಪಡೆದುಕೊಳ್ಳುವುದು ಎಂಬ ಚಿಂತೆಯಲ್ಲವೇ? ಅದಕ್ಕೆ ಯತಿಗಳೇ ಉತ್ತರಿಸುತ್ತಾರೆ. **ಹರಿ ಭಕುತಿ** ಎಂಬ ಭಾರಿ ಬೆಲೆ ಮಾತ್ರಕ್ಕೆ ಸಿಗುವಂಥಾದ್ದು ಎಂಬ ಅಂತರಂಗದ ವಿಷಯವನ್ನು ತಿಳಿಸುತ್ತಾರೆ.

ಶ್ರೀಹರಿಯ ಪಾದ ಪಂಕಜಗಳಿಗೆ ಅರ್ಪಿತವಾಗಿ, ಸೇವೆ ಗೈದಂಥ ಈ ಹೂಗಳ ಸೊಬಗು ಎಷ್ಟೆಂದರೆ, ಅವುಗಳ ಎದುರಿಗೆ ಬಂಗಾರ-ಬಂಗಾರದ ಹೂಗಳೂ ಕೂಡ **ಬಲು ಸಪ್ಪೆ** , ಸ್ವಚ್ಛ ಬಂಗಾರದ ಆಭರಣಗಳನ್ನೂ ಹಂಗಿಸುವಂತಿರುತ್ತವೆ. ಏಕೆಂದರೆ ಈ ಹೂಗಳು ಶ್ರೀಹರಿಯ ಪಾದಸೇವೆಗೆ ಅರ್ಪಿತವಾಗಿ, ಸಮರ್ಪಿತವಾಗಿ, ಪರಮ ಮಂಗಳಕರವಾಗಿದ್ದು ಇದನ್ನು ಭಕುತಿಯಿಂದ ಸ್ವೀಕರಿಸಿದವರಿಗೆ ಪರಮ ಮಂಗಳವನ್ನುಂಟು ಮಾಡುತ್ತವೆ ಎಂಬುವಲ್ಲಿ ಯತಿಗಳು ಭಕುತಾದಿಗಳಲ್ಲಿ ಶ್ರೀಹರಿ ಭಕುತಿಯನ್ನು ಜಾಗೃತಗೊಳಿಸುತ್ತಾರೆ.

✍ **ಗುರುಶ್ಯಾಮವಿಠ್ಠಲದಾಸರು**
**ಶ್ರೀಗಿರಿಕೃಪಾ, 7-5-86/115, ಜವಾಹರನಗರ, ರಾಯಚೂರು-584103.**

## ಶ್ರೀ ಹರಿ-ಗುರು ಭಕುತಿ

ಹೂ ಬೇಕೆ ಹೂವು ಪರಿಮಳದ ಹೂವು ॥ ಪ॥

ಪರಮಪುರುಷ ನಮ್ಮ ಕೃಷ್ಣನ ತೋಟದ ॥ ಅ.ಪ॥

ಮಲ್ಲಿಗೆ ಸಂಪಿಗೆ ಜಾಜಿ ಸೇವಂತಿಗೆ
ಮಲ್ಲೆ ಗುಲಾಬಿ ತಾವರೆ ಪಾರಿಜಾತ
ಎಲ್ಲ ವಿಧದ ಮನಕ್ಲೇಶವ ಕಳೆಯಲು
ಪುಲ್ಲಲೋಚನ ನಮ್ಮ ಕೃಷ್ಣನು ಧರಿಸಿದ ॥ 1॥

ದಾರದಿ ಕಟ್ಟಿಲ್ಲ ಮಾರು ಹಾಕುವುದಿಲ್ಲ
ಕೇರಿಕೇರಿಗಳಲ್ಲಿ ಮಾರುವುದಲ್ಲ
ಭೂರಿಭಕುತಿ ಎಂಬ ಭಾರಿಯ ಬೆಲೆಗಿದ
ಮಾರೆಂದು ಪೇಳಿದ ಶೌರಿಯ ಸೊಬಗಿನ ॥ 2॥

ರಂಗುರಂಗುಗಳಿಂದ ಕಂಗೊಳಸುವ ಸ್ವಚ್ಛ
ಬಂಗಾರದ ಛವಿ ಹಂಗಿಸುವ
ಶೃಂಗಾರಸಿಂಧು ಪ್ರಸನ್ನ ಶ್ರೀಮಾಧವ
ನಂಘ್ರಿಯ ಸಂಗದಿ ಮಂಗಳಕರವಾದ ॥ 3॥

-ಪ್ರಸನ್ನ ಸಾಹಿತ್ಯಸೌರಭ (ಪುಟ-109)

**ಶ್ರೀಲಕ್ಷ್ಮೀಮನೋಹರತೀರ್ಥರು 1670–1708**

ಶ್ರೀ ಶ್ರೀಪಾದರಾಜ ಮಠದ ಯತಿಪರಂಪರೆಯಲ್ಲಿ 16ನೇಯವರು
ಶ್ರೀರಘುನಾಥತೀರ್ಥರಿಂದ ಆಶ್ರಮ ಸ್ವೀಕಾರ
ಶ್ರೀ ಲಕ್ಷ್ಮೀಪತಿತೀರ್ಥರಿಗೆ ಆಶ್ರಮವನ್ನು ನೀಡಿ ಕಾವೇರಿತೀರದ ಓಡಪಳ್ಳಿ
ಗ್ರಾಮದ ಮಠದಲ್ಲಿ ಬೃಂದಾವನಸ್ಥರಾದರು.
ಪುಷ್ಯ ಶುದ್ಧ ಪೌರ್ಣಮಿ ಆರಾಧನೆ ದಿನ.





ಇದೇ ರೀತಿ ವಿಶ್ವಸಾಹಿತಿ ಷೇಕ್ಸ್‌ಪಿಯರ್‌ನ ಮರ್ಚೆಂಟ್ ಆಫ್ ವೆನಿಸ್ ನಾಟಕದ ಪಾತ್ರ ಪ್ರೋರ್ಷಿಯಾ ಹೇಳುವ ಚಿಂತನೆಯನ್ನು **ದಯಕಿಂತ ಗುಣವಿಲ್ಲ ನರಗೆ, ದಯಕೆ ನಿರ್ಬಂಧವಿಲ್ಲಣ್ಣ ಜಗದಿ** ಎಂದು ಮನಮುಟ್ಟಿ ಹೇಳುವ ಪರಮಹಂಸರು ಶ್ರೀವಿದ್ಯಾಪ್ರಸನ್ನ ತೀರ್ಥರು.

***ಪ್ರಶ್ನೆ: ವಿದ್ಯಾಪ್ರಸನ್ನರಿಗೆ ಆಧ್ಯಾತ್ಮಿಕ ಒಲವು ಮೂಡಲು ಪ್ರೇರಣೆ ನೀಡಿದ ಗುರುಗಳು ಯಾರು?***

**ಪ್ರೊ॥ ಗುರುರಾಜಾರಾವ್:** ಪಾಶ್ಚಾತ್ಯ ಧರ್ಮಶಾಸ್ತ್ರ ಹಾಗೂ ಭಾರತೀಯ ಸ್ಮೃತಿ, ಶೃತಿ, ಪುರಾಣಗಳ ತೌಲನಿಕ ಸಮೀಕ್ಷೆಯ ಬಗೆಗೆ ಶ್ರೀವಿದ್ಯಾಪ್ರಸನ್ನರು ಗಂಭೀರ ಚಿಂತನೆ ನಡೆಸಿದವರು. ಅಂದಿನ ಕಾಲದ ಪ್ರಖ್ಯಾತ ಸಂಸ್ಕೃತ ವಿದ್ವಾಂಸ **ನೆರೂರು ಕೃಷ್ಣಾಚಾರ್ಯರೊಂದಿಗೆ** ಯುವ ಯತಿ ನಡೆಸುತ್ತಿದ್ದ ಸಂವಾದ ನಮ್ಮೆಲ್ಲರಿಗೂ ಶಿಕ್ಷಣದಂತಿತ್ತು.

ಖ್ಯಾತ ಆಡಳಿತಗಾರ ಸರ್.ಸಿ.ಪಿ. ರಾಮಸ್ವಾಮಿ ಐಯ್ಯರ್‌ರವರು ಇವರ ಖ್ಯಾತಿಯನ್ನು ತಿಳಿದು ಇವರೊಂದಿಗೆ ಚರ್ಚಿಸಲು ಸೋಸಲೆ ವ್ಯಾಸರಾಜಮಠಕ್ಕೆ ಬಂದ ಘಟನೆಯಂತೂ ರಾಜ್ಯಾದ್ಯಂತ ಆಕರ್ಷಕ ಸುದ್ದಿಯಾಯಿತು. ಪ್ರಾಯಃ ಸರ್ ಸಿ.ಪಿ.ಯವರಿಗೆ ಮಾಧ್ವ ಯತಿಯೊಬ್ಬರ ದಾರ್ಶನಿಕ ಚಿಂತನೆಯು ಬೆಳಕು ತೋರಿದಂತೆ ಭಾಸವಾಗಿದ್ದರೆ ಅಚ್ಚರಿಯೇನಲ್ಲ.

***ಪ್ರಶ್ನೆ: ಇದೇ ರೀತಿಯ ಇನ್ನಾವುದಾದರೂ ಹೋಲಿಕೆ ನೆನಪು ಮಾಡಿಕೊಳ್ಳಿ?***

**ಪ್ರೊ॥ ಗುರುರಾಜಾರಾವ್:** ಇಂಗ್ಲೀಷ್ ಸಾಹಿತ್ಯದ **ಶೆಲ್ಲಿ, ವರ್ಡ್ಸ್‌ವತ್, ಕೀಟ್ಸ್** ಇವರೇ ಮೊದಲಾದ ಪ್ರಕೃತಿ ಹಾಗೂ ಶೃಂಗಾರ ಕವಿಗಳನ್ನು ಮೀರಿಸುವ ವರ್ಣನೆಯ ವಿವರಗಳನ್ನು **ಇಂದಿರೇಶ, ಸಿಂಧುಶಯನರ** ಲೀಲಾಚಟುವಟಿಕೆಗಳಲ್ಲಿ ನಮ್ಮ ಹರಿದಾಸರು ಚಿತ್ರಿಸಿದ್ದಾರೆ. ಆದರೆ ಇದನ್ನು ಆಸ್ವಾದಿಸುವ ಮನೋವೈಶಾಲ್ಯತೆ. ಹೃದಯವಂತಿಕೆ ಮತ್ತು ಆಸ್ವಾದನಾಪರಿಸರ ನಮ್ಮಲ್ಲಿಲ್ಲ.

**ಹರಿದಾಸ-ಯತಿ ಶ್ರೀವಿದ್ಯಾಪ್ರಸನ್ನರು**
**ಸಂದರ್ಶನ**

ಶ್ರೀವಿದ್ಯಾಪ್ರಸನ್ನರು ರಚಿಸಿದ **ಶ್ರೀಸುಮಧ್ವವಿಜಯ ಸಾರಸಂಗ್ರಹವೆಂಬ** 65 ಚರಣಗಳ ನೀಳ್ಗವನ ಇಂತಹ ಒಂದು ಅತ್ಯುತ್ತಮ ಹೋಲಿಕೆ. ದಾಸಸಾಹಿತ್ಯ ಅಭ್ಯಾಸಿಗಳು ಒಮ್ಮೆಯಾದರೂ ಓದಲೇ ಬೇಕಾದ ಕಾವ್ಯಕೃತಿ ಇದು.

***ಪ್ರಶ್ನೆ: ಶ್ರೀವಿದ್ಯಾಪ್ರಸನ್ನರು ದಾಸರಾಗಿ ಪ್ರಪಂಚಕ್ಕೆ ನೀಡಿದ ಸಂದೇಶವೇನು?***

**ಪ್ರೊ|| ಗುರುರಾಜಾರಾವ್:** ಕಳೆದ 70 ವರ್ಷಗಳಿಂದ ಶ್ರೀವಿದ್ಯಾಪ್ರಸನ್ನರ ಒಡನಾಟ ಹಾಗೂ ಅವರ ಕೃತಿಗಳ ಪರಿಚಯ ನನಗಿದೆ. ಇದನ್ನು ದೃಷ್ಟಿಯಲ್ಲಿಟ್ಟುಕೊಂಡು ಹೇಳಬಹುದಾದ ಮಾತು ಹೀಗಿದೆ:

ವಿಚಾರಶೀಲತೆಯನ್ನು ಭಕ್ತ ಬೆಳಸಿಕೊಳ್ಳಬೇಕು. ಪ್ರಪಂಚ ಬದಲಾಗುತ್ತಿರುವುದೆಂಬ ಪ್ರಜ್ಞೆ ಆತನಲ್ಲಿರಬೇಕು. ಜೀವನ ವಿಕಾಸಕ್ಕೆ ಮತ್ತು ಮುಕ್ತಿ ಮಾರ್ಗಕ್ಕೆ ಭಕ್ತಿ ಎಷ್ಟು ಅಗತ್ಯವೋ, ವಿಚಾರಶೀಲತೆಯೂ ಅಷ್ಟೇ ಮುಖ್ಯ. ಆಧ್ಯಾತ್ಮದ ಜೊತೆಜೊತೆಗೆ ವೈಜ್ಞಾನಿಕ ದೃಷ್ಟಿಯೂ ಬೇಕು. ವಿಜ್ಞಾನದ ಬಗೆಗೆ ನಮಗಿರುವ ತಪ್ಪು ಕಲ್ಪನೆ ವಿಕಾಸಕ್ಕೆ ಸರಿ ಎನಿಸುವುದಿಲ್ಲ. 1960ರಲ್ಲಿ ಮದರಾಸಿನಲ್ಲಿ ನಡೆದ ಅಖಿಲ ಭಾರತ ಮಾಧ್ವಮಹಾಮಂಡಲ ಸಭೆಯಲ್ಲಿ ಶ್ರೀ ಶ್ರೀವಿದ್ಯಾಪ್ರಸನ್ನತೀರ್ಥರು ಹೇಳಿದ ಈ ಮಾತುಗಳನ್ನೇ ದಾಸರಾಗಿ ಅವರು ನೀಡಿದ ಸಂದೇಶ ಎಂದು ಪರಿಗಣಿಸಬಹುದು.

ಮುಂದಿನ ನಮ್ಮ ಮಕ್ಕಳನ್ನು ವಿಚಾರವಂತರನ್ನಾಗಿ ಮಾಡಿ, ಅವರಿಗೆ ವಿಜ್ಞಾನ, ಆಧ್ಯಾತ್ಮ ಎರಡನ್ನೂ ಕಲಿಸಿ -ಇದು ಶ್ರೀ ಶ್ರೀವಿದ್ಯಾಪ್ರಸನ್ನರು ಯತಿವರ್ಯರಾಗಿ, ಮಿಗಿಲಾಗಿ ಹರಿದಾಸರಾಗಿ ಪ್ರಪಂಚಕ್ಕೆ ನೀಡಿದ ಸಂದೇಶ ಎಂದು ನಾನು ನಂಬುತ್ತೇನೆ.

ಗ್ರಂಥ ಋಣ (ರಂಗವಿಠಲ ಮಾಸಪತ್ರಿಕೆ ಡಿಸೆಂಬರ್ 2005)
ಸಂದರ್ಶಕ: **ಎಸ್.ಕೆ. ಶೇಷಚಂದ್ರಿಕ**
ಪತ್ರಕರ್ತ, ಖಾದಿಬಡಾವಣೆ, ಬನಶಂಕರಿ 3ನೇ ಹಂತ, ಬೆಂಗಳೂರು.

**ವಿದ್ಯಾಪ್ರಸನ್ನತೀರ್ಥರ**
**ಕೃತಿಗಳ ಬಗ್ಗೆ**

# ಹರಿ-ಗುರುಗಳಲ್ಲಿ ಭಕ್ತಿ

ಶ್ರೀ ವಿದ್ಯಾಪ್ರಸನ್ನತೀರ್ಥರು ಸೋಸಲೆ ವ್ಯಾಸರಾಜಮಠದ ಪರಂಪರೆಯಲ್ಲಿ ಬಂದಂಥ ಮೂವತ್ತೇಳನೇ (37) ಯತಿಗಳು. ಇವರು ಮಹಾವಿದ್ವಾಂಸರೂ ಕವಿಗಳೂ ಆಗಿದ್ದರು. ಇವರು ನೂರಾರು ದೇವರ ನಾಮಗಳನ್ನು ರಚಿಸಿ ಮಾಧ್ವ ವಾಙ್ಮಯಕ್ಕೆ ಅರ್ಪಿಸಿದ್ದಾರೆ. ಇವರು **ಇಪ್ಪತ್ತೊಂಬತ್ತು ವರ್ಷಗಳ ಕಾಲ ಶ್ರೀವೇಣುಗೋಪಾಲದೇವರ** ಪೂಜೆಯನ್ನು ಮಾಡಿದ್ದಾರೆ. ಇವರು **ಪ್ರಸನ್ನ** ಎಂಬ ಅಂಕಿತನಾಮದಿಂದ ದೇವರನಾಮಗಳನ್ನು ರಚಿಸಿದ್ದಾರೆ. ತಮ್ಮ ಮೂಲ ಗುರುಗಳಾದ ಶ್ರೀ ವ್ಯಾಸರಾಯರ ಬಗ್ಗೆ ರಚಿಸಿದ ಕೃತಿಯ ಪಲ್ಲವಿಯು ಈ ಕೆಳಗಿನಂತಿದೆ.

**ಅವನಿಯೊಳವತರಿಸಿದ ವ್ಯಾಸರಾಯ ಭೂಸುರಜನವರ್ಯ।**
**ಸುವಿನೋದವ ಪಡೆದರು ಸುರನರಜನರು || ಪ||**

ಶ್ರೀಹನುಮ, ಭೀಮ, ಮತ್ತು ಶ್ರೀಮಧ್ವ ಅವತಾರಗಳ ಮಹಿಮೆಯ ಬಗ್ಗೆ ರಚಿಸಿದ ಈ ಕೃತಿಯು ಬಹಳ ಪ್ರಸಿದ್ಧವಾದದು.

**ಜನುಮ ಜನುಮದಲಿ ಎನಗಿರಲಿ || ಪ||**

ಇನ್ನೂ ಅನೇಕ ವಾಯುದೇವರ ಅವತಾರದ ಮಹಿಮೆಯನ್ನು ವರ್ಣಿಸುವ ಕೃತಿಗಳನ್ನು ರಚಿಸಿದ್ದಾರೆ. **ಎಂಥ ವೈರಾಗ್ಯ ಹನುಮಂತ, ಹನುಮನ ಮತದಲಿ ಅನುಮಾನ ಬೇಡವೊ, ಹನುಮನ ಮನೆಯವರು ನಾವೆಲ್ಲರೂ, ಹನುಮಾನ್ ಕೀ ಜೈ** ಇತ್ಯಾದಿಗಳು.

ಶ್ರೀಮಹಾಲಕ್ಷ್ಮೀದೇವಿಯರ ಬಗ್ಗೆ ರಚಿಸಿದ ಈ ಕೃತಿಯು ಬಹಳ ರಸಭರಿತವಾಗಿದೆ.

**ಕವಳ ತಾಯಿ ಕವಳ ಅಮ್ಮ || ಪ||**

ಎಂದು ಪ್ರಾರಂಭವಾಗುವ ಈ ಕೃತಿಯಲ್ಲಿ ಶ್ರೀವಿದ್ಯಾಪ್ರಸನ್ನತೀರ್ಥರು ಹರಿ ಪ್ರಸಾದ ಮಹಿಮೆಯನ್ನು ತೋರುತ್ತ ಶ್ರೀಮಹಾಲಕ್ಷ್ಮಿಯಲ್ಲಿ ಅದನ್ನು ಪಡೆಯಬೇಕೆಂಬ ನಮ್ರತೆಯನ್ನು ತೋರಿದ್ದಾರೆ.

ಇನ್ನು ಅನೇಕ ಕೃತಿಗಳನ್ನು ಶ್ರೀವಿದ್ಯಾಪ್ರಸನ್ನತೀರ್ಥರು ರಚಿಸಿದ್ದು ಅವರು ಕವಿ ಪ್ರೌಢಿಮೆಯ, ಭಕುತಿಯ ಪರಾಕಾಷ್ಠತೆಯಿಂದ ಮೆರೆದಿದ್ದಾರೆ.

**ನರಸಿಂಗರಾವ್ ದೇಶಪಾಂಡೆ**
**ನಿವೃತ್ತ ವಾಣಿಜ್ಯ ತೆರಿಗೆ ಅಧಿಕಾರಿಗಳು 8-11-117, ಎನ್.ಜಿ.ಓ ಕಾಲೋನಿ, ರಾಯಚೂರು.**

ತಾಪಸ ಸತಿಯಳ ಶಾಪವ ಬಿಡಿಸಿದ ನಾಮ ಇದು. ಗೌತಮ ಮುನಿಗಳು ಗಳಿಸಿದ್ದ ಅತ್ಯಧಿಕ ಪುಣ್ಯರಾಶಿಯನ್ನು ಹ್ರಾಸಮಾಡಲು ದೇವಾನುದೇವತೆಗಳ ಪ್ರಾರ್ಥನೆಯಂತೆ ಅಮರಲೋಕದೊಡೆಯ ಇಂದ್ರದೇವ ಗೌತಮರಂತೆ ಬಂದು ಪತಿವ್ರತೆಯಾದ ಅಹಲ್ಯಾದೇವಿಯನ್ನು ಕೂಡಿದ. ಅದೇ ಸಮಯಕ್ಕೆ ಅಲ್ಲಿಗೆ ಬಂದ ಗೌತಮ ಮುನಿಗಳು ತಮ್ಮ ಪತ್ನಿಗೆ ಕಲ್ಲಿನಂತಾಗೆಂದು ಕೋಪದಿಂದ ಶಾಪವಿತ್ತರು. ಇದರಿಂದ ಗೌತಮರುಗಳಿಸಿದ್ದ ಅತಿಯಾದ ಪುಣ್ಯವು ಹ್ರಾಸವಾಯಿತು. ದೇವತೆಗಳ ಕಾರ್ಯಕ್ಕೆ ಇಂದ್ರದೇವ ಸಹಕಾರ ನೀಡಿದ್ದರಿಂದ ಅಹಲ್ಯಾಜಾರ ಎಂಬುದು ಅವನ ಗುಣ ವಿಶೇಷವಾಯಿತು. ಅಹಲ್ಯಾದೇವಿಗೆ ಆ ಶಾಪದ ವಿಮೋಚನೆ ರಾಮದೇವರಿಂದಾಯಿತು. ರಾಮದೇವರ ಪಾದ ಶಿಲೆಗೆ ಸೋಂಕಿದೊಡನೆ ರಾಮದೇವರ ಕೃಪಾ ಕಟಾಕ್ಷವೀಕ್ಷಣ ಮಾತ್ರದಿಂದ ಅಹಲ್ಯಾದೇವಿ ಚೈತನ್ಯತೆ ಪಡೆದಳು. ಭೂಪದಾಶರಥಿಯ ದಿವ್ಯನಾಮ ಜಪಿಸಿದಳು.

**ಲಂಕೆಯ ಪೊಕ್ಕು ನಿಶಾಚರರನಕೊಂದು ಪಂಕಜಾಕ್ಷಿಯ ಆತಂಕ ಕಳೆದನಾಮ** ನಿಶಾಚರರಿಂದ ಕೂಡಿದ ರಾವಣನ ಅಶೋಕವನದಲ್ಲಿ ಸೀತಾದೇವಿ ಅತಿಯಾದ ಶೋಕದಿಂದ ಕಂಗೆಟ್ಟು ಪ್ರತಿಕ್ಷಣ ಎಡೆಬಿಡದೆ ರಾಮನಾಮ ಜಪಿಸುತ್ತಿದ್ದುದರಿಂದ ರಾಮಚಂದ್ರ ತನ್ನ ಅನುಜ ಲಕ್ಷ್ಮಣ ಹಾಗೂ ಕಪಿಗಳೊಂದಿಗೆ ಲಂಕೆಗೆ ಹೋಗಿ ರಾವಣನನ್ನು ಕೊಂದು ಪಂಕಜಾಕ್ಷಿಯ ಆತಂಕ ಕಳೆದನು.

ಕೊನೆಯದಾಗಿ ಶ್ರೀರಾಮಚಂದ್ರ ಶಿಷ್ಟರ ರಕ್ಷಣೆ ದುಷ್ಟರ ಶಿಕ್ಷಣ ಮುಂತಾದ ಕಾರ್ಯಗಳನ್ನೆಲ್ಲಾ ಸಂಪೂರ್ಣಗೊಳಿಸಿ ಅವತಾರ ಸಮಾಪ್ತಗೊಳಿಸಿ ತನ್ನಧಾಮ ವೈಕುಂಠಕ್ಕೆ ತೆರಳುವ ಸಮಯದಲ್ಲಿ ತನ್ನವರನ್ನೆಲ್ಲಾ ತನ್ನೊಂದಿಗೆ ಬರಲು ಕರೆದನಂತೆ ಡಂಗುರ ಹೊಡೆಸಿದನಂತೆ.

**ಎನ್ನವರೆಲ್ಲರೂ ಬನ್ನಿರಿ ಎನ್ನುತ ತನ್ನೊಡನೊಯ್ದ ಪ್ರಸನ್ನರಾಮನ ನಾಮ** ಅವನು ಕರೆದೊಡನೆ ಯಾರ್ಯಾರು ಮೋಹ ಮಮತೆಗಳನ್ನೆಲ್ಲ ಒಗೆದು ಬಂದರೋ ಅವರನ್ನೆಲ್ಲ ಶ್ರೀರಾಮಚಂದ್ರ ತನ್ನ ಧಾಮಕ್ಕೆ ಕರೆದೊಯ್ದನಂತೆ. ಆದರೆ ನಾವುಗಳು ಗಂಡ, ಹೆಂಡತಿ, ಮಕ್ಕಳು ಇತ್ಯಾದಿ ಮೋಹಕ್ಕೆ ಸಿಕ್ಕಿಬಿದ್ದು ಇಲ್ಲೇ ಉಳಿದುಕೊಂಡ ಪಾಪಿಗಳು. ಆದರೂ ಚಿಂತೆಯಿಲ್ಲ ,ಈಗಲಾದರೂ ಅತಿಸುಲಭವಾದ **ಪ್ರಸನ್ನ ರಾಮನಾಮ** ಭಕ್ತಿಯಿಂದ ಹಾಡಿ ಮತ್ತೊಮ್ಮೆ ರಾಮದೇವರು ಕರೆದಾಗ ಹಿಂದೆ ಮುಂದೆ ನೋಡದೆ ಅವನೊಂದಿಗೆ ಹೋಗಲು ಸಿದ್ಧರಾಗಿರಿ ಎಂದು ವಿದ್ಯಾಪ್ರಸನ್ನತೀರ್ಥರು ಈ ಕೃತಿಯಲ್ಲಿ ನಮ್ಮನ್ನೆಲ್ಲಾ ಎಚ್ಚರಿಸಿದ್ದಾರೆ.

**✍ಡಾ|| ಎನ್.ಜಿ. ವಿಜಯಲಕ್ಷ್ಮೀರಾಘವೇಂದ್ರಾಚಾರ್ಯ**
**333, 12ನೇ ಮುಖ್ಯರಸ್ತೆ, ಗೋಕುಲ ಬಡಾವಣೆ, ಬೆಂಗಳೂರು-54.**





# ಶ್ರೀವಿದ್ಯಾಪ್ರಸನ್ನತೀರ್ಥರು

ಈ ಶತಮಾನದಲ್ಲಿ ಹರಿದಾಸ ಸಾಹಿತ್ಯವನ್ನು ಪ್ರಚುರಪಡಿಸಿದ ಯತಿಗಳಲ್ಲಿ ಹೆಚ್ಚು ಕೀರ್ತನೆಗಳನ್ನು ಬರೆದವರು ಶ್ರೀವಿದ್ಯಾಪ್ರಸನ್ನತೀರ್ಥರು. ಇವರ ಜನ್ಮಸ್ಥಳ ಸೋಸಲೆ. ಪ್ರಸನ್ನತೀರ್ಥರು ಮಠದ ಶಾಶ್ವತ ಸಾಹಿತ್ಯ ಮತ್ತು ಸಿದ್ಧಾಂತಗಳ ಅಧ್ಯಯವನ್ನು ಗಂಭೀರವಾಗಿ ನಡೆಸಿದರು. ಆ ಕಾಲದಲ್ಲಿಯೇ ಅವರ ಸಾಹಿತ್ಯ, ಪ್ರತಿಭೆ, ಹಾಡುಗಳಾಗಿ ಮೂಡಿ ಬಂದವು.

ಶ್ರೀ ವಿದ್ಯಾಪ್ರಸನ್ನತೀರ್ಥರು ಕಾನೂನು ಪದವಿಯನ್ನು ಪಡೆದು ನ್ಯಾಯವಾದಿಗಳಾಗಿದ್ದರು, ಶಾಸನ ಸಭೆಯ ಅಧಿಕಾರದ ಕನಸನ್ನೂ ಹೊಂದಿದ್ದರು. ಆದರೆ ಅವರಿಗೆ ದೊರೆತಿದ್ದು ಹರಿಶಾಸನ ಸಭೆಯ ಅಧಿಕಾರ. ಯತ್ಯಾಶ್ರಮ ಸ್ವೀಕರಿಸಿದ ಮೇಲೆ ಅವರೇ ಹೇಳುವಂತೆ ಹೊಸ ಚೈತನ್ಯ ವಿಕಸಿತವಾಯಿತು. ಆತಂಕಗಳು ದೂರವಾದವು, ಹರಿ ಇಚ್ಛೆಯಂತೆ ನಡೆಯುವದೇ ಶ್ರೇಷ್ಠಮಾರ್ಗವೆಂದು ತೋರಿತು. ಸಿರಿಯನ್ನು ವೈಭವದ ಪರಿಯನ್ನು ತಿರಸ್ಕರಿಸಿ ಹರಿಯ ಚರಣ ಸೇವೆಯಲ್ಲಿ ಸುಖವನ್ನು ಬಯಸಿದರು.

ಹರಿಕೀರ್ತನೆಗಳ ರಚನೆ ಹರಿಯ ಗುಣಗಾನ ಮಾಡಿ ಹಿಗ್ಗುವ ಭಾಗ್ಯ ವೇದಶಾಸ್ತ್ರಾಧ್ಯಯನ, ಹರಿದಾಸರ ಸ್ನೇಹ ಇವುಗಳಿಂದ ತಮ್ಮ ಬದುಕಿನಲ್ಲಿ ಉಂಟಾದ ಬದಲಾವಣೆಗಳನ್ನು ನಿರೂಪಿಸಿದ್ದಾರೆ. ವಿದ್ಯಾಪ್ರಸನ್ನತೀರ್ಥರು ಸುಮಾರು 300 ಹಾಡುಗಳನ್ನು ರಚಿಸಿದ್ದಾರೆ.

ಇವರ ಕೀರ್ತನೆಗಳು ಬಹುಭಾಗ ಕೃಷ್ಣನ ಬಾಲಲೀಲೆಗಳಿಗೆ ಸಂಬಂಧಿಸಿದ್ದು ಸಖ್ಯ, ವಾತ್ಸಲ್ಯ ಮತ್ತು ಮಧುರ ಭಾವವನ್ನು ನಿರೂಪಿಸುವ ನೂರಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದಾರೆ. ಭಾಗವತದ ಅಧ್ಯಯನ ಮತ್ತು ಪ್ರವಚನದಿಂದ ಸ್ವಾಭಾವಿಕವಾಗಿ ಮನಸ್ಸಿನಲ್ಲಿ ನೆಲೆಸಿದ್ದ ಕೃಷ್ಣ ಕಥೆ ಬಿಡಿ ಬಿಡಿಯಾದ ಹಾಡುಗಳಾಗಿವೆ. ಆತ್ಮಶೋಧನೆಯ ಮತ್ತು ನೀತಿ ಪರವಾದ ಧೀರ್ಘ ಕೃತಿಗಳನ್ನು ಮುಕ್ತಕಗಳನ್ನು ರಚಿಸಿದ್ದಾರೆ.

ಶ್ರೀವಿದ್ಯಾಪ್ರಸನ್ನತೀರ್ಥರು 25 ಮುಕ್ತಕಗಳಲ್ಲಿ ಹೀಗೆ ನಿರೂಪಿಸುತ್ತಾರೆ. ಅವುಗಳೆಂದರೆ ಕಾಲ ಸ್ಥಿತಿಯಿಂದ ಬದಲಾಗತ್ತಿರುವ ಮನುಷ್ಯನ ಸ್ವಭಾವ, ಸಡಿಲವಾಗುತ್ತಿರುವ ನಂಬಿಕೆಗಳು, ಸಾಮಾಜಿಕ ಬದಲಾವಣೆಗಳು, ಸಮಾಜ ನಮ್ಮನ್ನು ನೋಡುವ ರೀತಿ ಇತ್ಯಾದಿ ವಿಷಯಗಳು ಈ ಚೌಪದಿಗಳಲ್ಲಿ ಅಡಕವಾಗಿವೆ. ಯತಿಗಳಾದರೂ ಸಮಕಾಲೀನ ಸಾಮಾಜದ ಆಗುಹೋಗುಗಳಿಗೆ ಸ್ಪಂದಿಸಿ ಸರಳವಾಗಿ ಪ್ರತಿಕ್ರಿಯೆ ತೋರುವದು ಈ ರಚನೆಗಳ ವೈಶಿಷ್ಟ್ಯ. ಆಡಂಬರ ರಹಿತವಾದ ಸರಳ ಆಚರಣೆಯಾಗಬೇಕು ಎಂಬುದು ವಿದ್ಯಾಪ್ರಸನ್ನತೀರ್ಥರ ಆಶಯ.

ಉದಯದಲ್ಲಿ ನದಿಯಸ್ನಾನ, ಹರಿಯ ಪಾದೋದಕ ಪಾನ, ಧ್ಯಾನ, ಜಪ, ತಪ, ಪ್ರವಚನ ಇವುಗಳನ್ನು ಮಾಡುತ್ತ ಸಜ್ಜನ ಸಂಪರ್ಕದಲ್ಲಿ ಕಾಲಕಳೆಯುವದೇ ಯತಿಧರ್ಮ ಎಂದು ಧೃಡವಾಗಿ ನಂಬಿದ್ದ ವಿದ್ಯಾಪ್ರಸನ್ನತೀರ್ಥರು ಲೌಕಿಕ ವಿಷಯಗಳಿಗೆ ಆಧ್ಯಾತ್ಮಿಕ ಅರ್ಥ ನೀಡಿ ಕೃತಿಗಳನ್ನು ರಚಿಸಿದರು.

ಹರಿಕೀರ್ತನೆ, ಆತ್ಮಶೋಧನೆ, ಲೋಕನೀತಿ, ಸಂಪ್ರದಾಯದ ಹಾಡುಗಳು ಇವುಗಳ ಜೊತೆಗೆ **ಕೊಡಿಟ್ಟ ಕೈ** ಮತ್ತು **ಜಿಹ್ವಾಚಾಪಲ್ಯ** ಎಂಬ ನಾಟಕಗಳನ್ನು ವಿದ್ಯಾಪ್ರಸನ್ನತೀರ್ಥರು ಬರೆದಿದ್ದಾರೆ. ಹರಿದಾಸ ಸಾಹಿತ್ಯದಲ್ಲಿ ಸ್ವತಂತ್ರ ರಚನೆಗಳು ಕಡಿಮೆಯಾಗಿ ಧಾರ್ಮಿಕ ಚಿಂತನೆಗಳೂ ಮತ್ತು ಆಚರಣೆಗಳು ಸಡಿಲವಾಗುತ್ತಿದ್ದ ಕಾಲದಲ್ಲಿ ಶ್ರೀಪಾದರಾಜರ, ವ್ಯಾಸರಾಜರ ಸಂಪ್ರದಾಯವನ್ನು ಉಳಿಸಲು ಪ್ರಯತ್ನಿಸಿದವರು ವಿದ್ಯಾಪ್ರಸನ್ನತೀರ್ಥರು. ಈ ದೃಷ್ಟಿಯಿಂದ ವಿದ್ಯಾಪ್ರಸನ್ನತೀರ್ಥರು ಹರಿದಾಸ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖನೀಯರಾಗಿದ್ದಾರೆ.

**ಶ್ರೀಮತಿ ಜಯಶ್ರೀ ಗುತ್ತಲ**
**13, ನರಸಿಂಹ ಕೃಪಾ, ಕೇಶವನಗರ, ಸ್ಟೇಟ ಬ್ಯಾಂಕ್ ಕಾಲೋನಿ,ಧಾರವಾಡ-7**





## ಗಾನಕೆ ಸುಲಭ ರಾಮನಾಮ

**ಕಲಿಯುಗದಿ ಗಾನದಿ ಕೇಶವನೆಂದರೆ ಕೈಗೊಡುವನು ರಂಗವಿಠಲ** ಎಂದಿದ್ದಾರೆ ಶ್ರೀ ಶ್ರೀಪಾದರಾಜರು. ಗಾನದಿ ಭಗವಂತನನ್ನು ಒಲಿಸಿಕೊಳ್ಳಬೇಕೆಂದರೆ **ಗಾನಕೆ ಸುಲಭರಾಮನಾಮ ಗಾನಕೆ ಅತಿಸುಲಭ** ಎಂದು ವಿದ್ಯಾಪ್ರಸನ್ನತೀರ್ಥ ಶ್ರೀಪಾದಂಗಳವರು ಪ್ರತಿಪಾದಿಸಿದ್ದಾರೆ.

**ಗಾನಕೆ ಸುಲಭವು ರಾಮನಾಮವು ಗಾನಕೆ ಅತಿಸುಲಭ ॥ ಪ॥**

**ದೀನಜನಕೆ ಬಲು ಸಾನುರಾಗನಾದ।**
**ಜಾನಕಿನಾಥನ ದಿವ್ಯನಾಮವು ॥ ಅ.ಪ॥**

**ಆನಾವು ಈನಾವುವೆಂದು ನೆಚ್ಚಿ ಕೆಡಲಿಬೇಡಿ,** ದೀನ ಜನರು ಸಾನುರಾಗದಿಂದ, ಪ್ರೀತಿಯಿಂದ, ಭಕ್ತಿಯಿಂದ ಗಾನ ಮಾಡಲು ಜಾನಕಿನಾಥನ ಈ ದಿವ್ಯನಾಮ ಅತಿ ಸುಲಭ.

**ತಾಳತಂಬೂರಿ ಮೃದಂಗಗಳಿಂದಲಿ।**
**ಪೇಳುವರಿಗೆ ರಘುಮೌಳಿಯ ನಾಮವು ॥ 1॥**

**ಘೋರ ಕಲುಷಗಳ ಪಾರಗಾಣಿಸಿ ಮನ।**
**ಕೋರಿಕೆಗಳನೀವ ತಾರಕನಾಮವು ॥ 2॥**

**ತಾಳ ಬೇಕು ತಕ್ಕ ಮೇಳಬೇಕು** ಎನ್ನುವಂತೆ ತಾಳ ತಂಬೂರಿ ಮೃದಂಗಗಳಿಂದ ರಘುಮೌಳಿಯನಾಮ ಹಾಡಿದರೆ ಪೇಳುವವರಿಗೆ ಮಹದಾನಂದ ಕೇಳುವವರಿಗೂ ಸಹ ಅಷ್ಟೇ ಆನಂದ ಕೇವಲ ಆನಂದವೇ ಪ್ರಧಾನವಲ್ಲ, ಅದಕ್ಕಿಂತಲೂ ಮಿಗಿಲಾಗಿ ಘೋರ ಕಲುಷಗಳನ್ನು ಪಾರುಗೊಳಿಸುತ್ತವೆ. ಜೊತೆಗೆ ನಮ್ಮ ಮನಸ್ಸಿನ ಪೂರೈಕೆಗಳನ್ನೂ ಪೂರೈಸುವ ತಾರಕನಾಮ ಇದಾಗಿದೆ.

**ತಾಪಸಸತಿಯಳ ಶಾಪವ ಬೀಡಿಸಿದ।**
**ಭೂಪ ದಾಶರಥಿ ದಿವ್ಯನಾಮವು ॥ 3॥**

**-ಪ್ರಸನ್ನ ಸಾಹಿತ್ಯಸೌರಭ (ಪುಟ-42)**

ಕೂಸಾಗಿದ್ದಾಗ ಹುರಳಿಯನ್ನು ಮೆದ್ದದ್ದು, ಮುಂದೆ ಒಂದು ಸಂದರ್ಭದಲ್ಲಿ 200ಕ್ಕೂ ಹೆಚ್ಚು ಬಾಳೆಹಣ್ಣುಗಳನ್ನು ಭಿಕ್ಷೆಯ ನಂತರ ತಿಂದದ್ದು ಆಶ್ಚರ್ಯಕರವಾದರೂ ಸತ್ಯ. ಸುಮಧ್ವವಿಜಯದಲ್ಲಿ ತಿಳಿಸಿರುವಂತೆ ನನ್ನ ಜಠರದಲ್ಲಿ ಹೆಬ್ಬೆರಳು ಗಾತ್ರದ ಅಗ್ನಿಯೊಂದು ಸದಾ ಉರಿಯುತ್ತಿರುತ್ತದೆ ಎಂದು ಶ್ರೀ ಮದಾಚಾರ್ಯರೇ ತಿಳಿಸಿದ್ದಾರೆ. ಆದ್ದರಿಂದ ಅವರ ಸುಂದರ ಕಾಯಕ್ಕೆ ಯಾವ ವಿಕಾರವು ಆಗದೆ ಯಾವಾಗಲೂ ಸುಂದರವಾಗಿರುತ್ತದೆಂದು ಅಭಿಪ್ರಾಯ. ಶ್ರೀಮದಾಚಾರ್ಯರ ಶರೀರ ಲಕ್ಷಣಗಳಿಂದಲೇ ಅವರೊಬ್ಬ ದೊಡ್ಡ ಜ್ಞಾನಿಗಳು ಎಂದು ನಾರಾಯಣ ಪಂಡಿತಾಚಾರ್ಯರು ತಿಳಿಸಿದಂತೆ ಪೂಜ್ಯ ಶ್ರೀ ವಿದ್ಯಾಪ್ರಸನ್ನತೀರ್ಥರು ಶ್ರೀಮದಾಚಾರ್ಯರನ್ನು ಸ್ತುತಿಸಿದ್ದಾರೆ.

ಶ್ರೀಮದಾಚಾರ್ಯರ ಗಾಂಭೀರ್ಯ, ಧೈರ್ಯ, ಬ್ರಹ್ಮವರ್ಚಸ್ಸು, ಇತ್ಯಾದಿಗಳನ್ನು ಕಂಡು ತುರುಷ್ಕರಾಜನು ಅರ್ಧರಾಜ್ಯವನ್ನೇ ಸಮರ್ಪಿಸಿದಂಥದ್ದನ್ನು ಇಲ್ಲಿ ಸ್ಮರಿಸಬಹುದು. ಅತಿ ಮಂಗಲಕರವಾದ, ಸುಂದರವಾದ, ಹರ್ಷೋಲ್ಲಾಸ ಸುಖವನ್ನೀಯುವಂಥ ಕಾಯ ಸುಖತೀರ್ಥರ ಕಾಯ ಎಂದು ಸ್ತೋತ್ರ ಮಾಡಿರುವದನ್ನು ಕಾಣಬಹುದು.

ಸಂತತ ಹರಿದಾಸ್ಯದಲಿ ಪ್ರಸನ್ನರು ಶ್ರೀಮದಾಚಾರ್ಯರ ದರ್ಶನದಿಂದ ಚಿಂತೆ ಸಂತಾಪಗಳೆಲ್ಲಾ ತೊಲಗಿ ಸುಧಾಪಾನದ ಸುಖವನ್ನಿತ್ತು ಶಾಂತಿ ನಿಲಯಾಶ್ರಯದಲ್ಲಿ ನೆಲೆಸಲು ಸೋಪಾನವಾಗುವದೆಂಬುವದೇ ಈ ಸ್ತೋತ್ರದ ಅರ್ಥ.

ಪ್ರಾತಃ ಸ್ಮರಣೀಯರಾದ ಪೂಜ್ಯ ಶ್ರೀ ವಿದ್ಯಾಪ್ರಸನ್ನತೀರ್ಥರ ಕೃತಿಗಳನ್ನು ಅರ್ಥೈಸುವದು ಸುಲಭವೇನಲ್ಲ. ಅವರ ಕರಕಮಲ ಸಂಜಾತರಾದ ಪೂಜ್ಯ ಶ್ರೀ ವಿದ್ಯಾಪಯೋನಿಧಿಗಳು ತಮ್ಮ ಗುರುಗಳ ಸ್ತೋತ್ರದಲ್ಲಿ **ಆಗಮ ನಿಗಮ ಪುರಾಣಗಳೆಲ್ಲವು...** ಭಾಗವತಪ್ರಿಯ, ಕವಿ ಪುಂಗವರು, ಎಂದು ಹೇಳಿದ್ದಾರೆ. ಅವರ ಪುಣ್ಯಸ್ಮರಣೆಯಲ್ಲಿ ಪಾಲ್ಗೊಳ್ಳುವುದೇ ಮಹಾಭಾಗ್ಯ ಎಂದು ಭಾವಿಸಿ ಆಧಾತ್ಮ ಚಿಂತನೆಯಲ್ಲಿ ವಿಶೇಷ ಕ್ರಾಂತಿಮಾಡಿದ ಪೂಜ್ಯ ಶ್ರೀ ಉಪ್ಪಲಿ ಮಧ್ವರಾಯರ ಹಾಗೂ ಪೂಜ್ಯ ಶ್ರೀಕಾಶಿಹನುಮಂತದಾಸರ ಪುಣ್ಯವಿಶೇಷವೇ ಇಂಥ ಭಾಗ್ಯ ಪಾಲಿಸಿದ್ದೆಂದು ತಿಳಿಯುತ್ತೇನೆ.

ಪರಮ ಪೂಜ್ಯ ಶ್ರೀ ವಿದ್ಯಾಪ್ರಸನ್ನ ಗುರು ಸಾರ್ವಭೌಮರೇ **ಹಿರಿಯ ನಿಮ್ಮಯ ವ್ಯಾಪ್ತಿ ಕಿರಿದು ಎಮ್ಮಯ ಶಕ್ತಿ** ಎಂಬಯುಕ್ತಿಯಂತೆ ಪೂಜ್ಯರ ಪಾದಾರವಿಂದಗಳಲ್ಲಿ ಅನಂತಾನಂತ ನಮನಗಳನ್ನು ಸಲ್ಲಿಸುತ್ತೇವೆ.

**ಡಾ|| ಶ್ರೀನಿವಾಸ ಕಟ್ಟಿ**
**353, 5ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬೆಂಗಳೂರು-50**





# ಮಾತರಿಶ್ವನ್

ಶ್ರೀವಿದ್ಯಾಪ್ರಸನ್ನತೀರ್ಥರು ಹನಮ, ಭೀಮ ಮಧ್ವಾವತಾರದ ಕಥೆಗಳ ಭಾಗವನ್ನು ವಿವರಿಸುತ್ತಾರೆ. ಈ ಕೃತಿಯಲ್ಲಿ ಪ್ರಥಮತಃ ಅವರು ಬೇಡುವುದೇನೆಂದರೆ ಎಷ್ಟು ಜನುಮ ಮಾನವನಾಗಿ ಜನಿಸಿದರೂ ಹನುಮ, ಭೀಮ, ಮಧ್ವರ ಸೇವೆಯ ಭಾಗ್ಯ ದೊರೆಯಲಿ ಎಂದು ದೈನ್ಯದಿಂದ ಪ್ರಾರ್ಥಿಸುತ್ತಾರೆ.

**ಮಾತರಿಶ್ವ ನೀ ಪ್ರೀತನಾಗೆ ಅಜ।**
**ತಾತನು ಸುಲಭದಿ ಒಲಿಯುವನು।**
**ಕೋತಿಯ ರೂಪದಿ ಭೂತಲದಲಿ ಬಲು।**
**ಖ್ಯಾತಿ ಪಡೆದ ರಾಮದೂತರ ಸೇವೆಯು ॥ 1॥**

ಮೊದಲನೆಯ ಸಾಲುಗಳಲ್ಲಿ ವಾಯ್ವಾತಾರವನ್ನು ಮಾತರಿಶ್ವ ಎಂಬ ಪದದಿಂದ ಬಣ್ಣಿಸುತ್ತಾರೆ.

**ಮಾತರಿಶ್ವ** ಎಂಬ ಪದವು ಬಹು ಅರ್ಥಗಳಿಂದ ಕೂಡಿದ್ದುದಾಗಿದೆ. ಜೀವರ ದೇಹಗಳಲ್ಲಿ ನೆಲೆಸಿ ದೇಹ ಇಂದ್ರಿಯಗಳಿಗೆ ವಾಯುದೇವರು ಪ್ರೇರಕರಾದ್ದರಿಂದ ಮಾತರಿಶ್ವ ಎಂದು ಕರೆಯುತ್ತಾರೆ. **ಸ್ವಶನಃ ಸ್ಪರ್ಶನೋವಾಯುರ್ ಮಾತರಿಶ್ವ ಸದಾಗತಿಃ** ಎಂದು ಅಮರಕೋಶದಲ್ಲಿ ವಾಯುವಿನ ಹೆಸರೆಂದು ಸೂಚಿಸಲಾಗಿದೆ. **ಮಾತರಿ** ಎಂಬ ಪದಕ್ಕೆ ಜ್ಞಾನವೆಂಬ ಅರ್ಥವನ್ನು ನೀಡುತ್ತಾರೆ. ವಾಯುದೇವರು ಜ್ಞಾನಿಯಾದ್ದರಿಂದ ಇವರು ಮಾತರಿಶ್ವ ಎಂದು ಕರೆಸಿಕೊಳ್ಳುತ್ತಾರೆ. **ಮಾತರಿ** ಎಂದರೆ ಅಂತರಿಕ್ಷದಲ್ಲಿ, **ಶ್ವಾ** ಸಂಚರಿಸುವಂತಾದ್ದು ಎಂದರೆ ಗಾಳಿ. ಗಾಳಿಯ ಅಭಿಮಾನಿ ದೇವತೆಯು ವಾಯುವು.

**ಮಾತರಿ** ಎಂದರೆ ವೇದಾದಿ ಸಪ್ತಮಾತೃಕೆಗಳು ,**ಶ್ವಾ** ಎಂದರೆ ಸಂಚರಿಸುವವನು ಅಥವಾ ಪ್ರತಿಪಾದ್ಯನು, ಸಕಲ ವೇದ ಪ್ರತಿಪಾದ್ಯ ಪರಮಾತ್ಮ. ವಾಯುದೇವರು ಈ ಸಕಲವೇದಗಳನ್ನು ವಿಷ್ಣು ಪರ ಪ್ರತಿಪಾದಿಸತಕ್ಕವರು.

ಪುರಾಣಗಳಲ್ಲಿ ಮಾತರಿಶ್ವ ಎಂಬ ಪದಕ್ಕೆ ಹನ್ನೊಂದು ವಿಶೇಷಾರ್ಥವನ್ನು ನೀಡಿದ್ದಾರೆ.

**ಮಾತರಿ** ಎಂದರೆ ಜಗಜ್ಜನನಿಯಾದ ಮಹಾಲಕ್ಷ್ಮಿಯಲ್ಲಿ **ಶ್ವಾ** ವಾಸಮಾಡುವವನು ಅಂದರೆ ಪ್ರಳಯಕಾಲದಲ್ಲಿ ವಾಯುದೇವರು ಲಕ್ಷ್ಮಿಯಲ್ಲಿ ಲಯ ಹೊಂದುವರು ಎಂದು ಅರ್ಥ.

ಇಂತಹ ಮಾತರಿಶ್ವ ನಾಮಕರಾದ ವಾಯುದೇವರನ್ನು ಪ್ರಸನ್ನಗೊಳಿಸಿದರೆ ಹರಿಯ ಒಲುಮೆಯನ್ನು ಸುಲಭವಾಗಿ ಪಡೆಯಬಹುದು ಎಂಬುದು ದಾಸರ ಅಭಿಪ್ರಾಯ.

**ಹರನ ಭಕುತ ಜರಾಸಂಧನ ಕಾಯ।**
**ಹರಿದು ಮುರಿದು ಬಲು ಸುಲಭದಲಿ।**
**ಹರಿಗಪರೋಕ್ಷದಿ ಅರ್ಪಣೆ ಮಾಡಿದ।**
**ಕುರುಕುಲಪತಿ ಬಲಭೀಮರ ಸೇವೆಯು ॥ 2॥**

ಭೀಮಸೇನದೇವರು ಕೃಷ್ಣನ ಎದುರಿನಲ್ಲಿಯೇ ಜರಾಸಂಧನ ದೇಹವನ್ನು ಹರಿದು ಮುರಿದು ತನ್ನ ಶಕ್ತಿ ಸಾಮರ್ಥ್ಯಗಳನ್ನು ಹರಿಯಲ್ಲಿ ಅರ್ಪಿಸಿದ ಕಥೆಯನ್ನು ಈ ಸಾಲುಗಳಲ್ಲಿ ವರ್ಣಿಸಿದ್ದರಿಂದ ಎರಡನೆ ಅವತಾರದ ಕಥಾ ವಿಶೇಷವನ್ನು ತಿಳಿಸಿದಂತಾಯಿತು.

**ಶುದ್ಧ ದ್ವಿಜಕುಲದಿ ಉದ್ಭವಿಸುತ ಅನಿ।**
**ರುದ್ಧನಿಗಮನುಮತವಾಗಿರುವ।**
**ಸಿದ್ಧಾಂತದ ಪದ್ಧತಿಯನು ತೋರಿದ।**
**ಮಧ್ವಮತದ ತತ್ವದಲಿ ಪ್ರಸನ್ನತೆ ॥ 3॥**

ಶುದ್ಧರಾದ ಬ್ರಾಹ್ಮಣರ ಕುಲದಲ್ಲಿ ಜನಿಸಿದ ವಾಯ್ವಾವತಾರರಾದ ಮಧ್ವರು ಅನಿರುದ್ಧನಿಗೆ ಅಭಿಮನ್ಯಮಾನವಾದ ಸಿದ್ಧಾಂತವನ್ನು ಪ್ರಸರಿಸಿದರು. ಇವರು ತೋರಿದ ಮಾರ್ಗವೇ ದ್ವೈತಸಿದ್ಧಾಂತವೆಂದು ಪ್ರಚುರವಾಯಿತು.

ಜನ್ಮ ಜನ್ಮಕ್ಕೂ ವಾಯುವೇ ತಂದೆ, ತಾಯಿ, ಅಣ್ಣ, ತಮ್ಮ, ಬಂಧು . ವಾಯುದೇವರು ನಿಜವಾದ ಸ್ವರೂಪೋದ್ಧಾರಕರು. ಜನ್ಮಕೊಟ್ಟ ಮಾತಾಪಿತೃಗಳು ಒಂದು ಜನ್ಮಕ್ಕೆ ಮಾತ್ರ ಮಾತಾಪಿತೃಗಳು, ಆದರೆ ವಾಯುದೇವರು ಜನ್ಮ ಜನ್ಮಾಂತರಗಳಲ್ಲಿಯೂ ಮಾತಾಪಿತೃಗಳು. ಆದ್ದರಿಂದ **ಮಾತರಿಶ್ವ** ಎಂಬುದು ವಾಯುದೇವರಿಗೆ ಮಾತ್ರ ಸಂಯೋಜಕವಾಗುತ್ತದೆ.

**ಪ್ರವೀಣ್ ಜೋಶಿ**
**ರಾಘವೇಂದ್ರಕಾಲೋನಿ, ಚಾಮರಾಜಪೇಟೆ, ಬೆಂಗಳೂರು-18**



## ಆಚಾರ್ಯ ಮಧ್ವರ ಸ್ತುತಿ

**ಬರುತಲಿಹರು ನೋಡಿ ಗುರುವರೇಣ್ಯ**
**ಸುಖತೀರ್ಥ ಯತಿವರರು ॥ ಪ॥**

**ಹರಿದು ಬರುವ ಸುರನದಿಯ ಪ್ರವಾಹದ**
**ತೆರದಲಿ ಪರಿ ಪರಿ ಪರಿವಾರ ಸಹಿತ ॥ ಅ.ಪ॥**

ಎಂದು ಪ್ರಾರಂಭವಾಗುವ ಈ ಪದವು ಶ್ರೀವಿದ್ಯಾಪ್ರಸನ್ನತೀರ್ಥರ ಅಮೋಘ ಕವಿತಾ ಶೈಲಿಯನ್ನು ತಿಳಿಸಿಕೊಡುವುದಲ್ಲದೆ. 13 ವಿವಿಧ ರಾಗಗಳಿಗೆ ಸಂಯೋಜಿಸಿರುವುದು ವಿಶೇಷವಾಗಿದೆ. ಪೂರ್ವಿಕಲ್ಯಾಣಿ, ಬಿಲಹರಿ, ಸಾವೇರಿ ಇತ್ಯಾದಿ 13 ರಾಗಗಳಲ್ಲಿ ಇದನ್ನು ಸಂಯೋಜಿಸಿದ್ದಾರೆ.

ಕರದಲಿದಂಡಕಮಂಡಲ, ಕೊರಳೊಳು ತುಳಸಿ ಮಾಲೆ, ದ್ವಾದಶ ನಾಮಾಂಕಿತರಾಗಿ, ಯತಿಗಳು, ಗೃಹಸ್ಥಾಶ್ರಮಿಗಳು, ಬ್ರಹ್ಮಚಾರಿಗಳು, ಎಲ್ಲರ ಮಧ್ಯ ಸಂಭ್ರಮದಲ್ಲಿ ಇರುವ ಇವರನ್ನು ಕಂಡು **ಪುರುಷ ರತುನ** ಅಂದರೆ ಪುರುಷ ಶ್ರೇಷ್ಠರು ಅಥವಾ ಜೀವೋತ್ತಮರು ಎಂದಿದ್ದಾರೆ. ಇದೇ ಮಾತನ್ನು ಶ್ರೀಜಗನ್ನಾಥದಾಸರು, ಪೂಜ್ಯ ವಿಜಯದಾಸರ ಸ್ತೋತ್ರ ಮಾಡುವಾಗ **ರತುನ ದೊರಕಿತಲ್ಲ** ಎಂದು ಬಣ್ಣಿಸಿದ್ದಾರೆ.

ಆಚಾರ್ಯರ ಪಾದ ನಖ ವರ್ಣನೆ ಮಾಡುತ್ತಾ ಪದುಮರಾಗದ ಕಾಂತಿಯನ್ನು ಮೀರಿದವುಗಳೆಂದು ವರ್ಣಿಸುತ್ತಾರೆ. ಅವರ ಶಿರಪಾದಾದಿ ಸುಂದರಾಂಗವನ್ನು ವರ್ಣಿಸುತ್ತ ಅತಿ ಸುಂದರ ಪುರುಷರಿವರೆಂದು ಪೊಗುಳುತ್ತಾರೆ, ದ್ವಾತ್ರಿಂಶಲಕ್ಷೋಣೋಪೇತರಾದ ವಾಯುದೇವರ ಅವತಾರರಾದ ಶ್ರೀಮದಾಚಾರ್ಯರನ್ನು ಹೀಗೆ ಕೊಂಡಾಡಿದ್ದಾರೆ. ಒಟ್ಟಾರೆ ಇವರನ್ನು ಸರ್ವಾಂಗ ಸುಂದರರು ಎಂದು ವರ್ಣಿಸಿದ್ದಾರೆ.

ಅತೀ ಮಂಗಳಕರವಾದ ಸುಂದರವಾದ ಹರ್ಷೋಲ್ಲಾಸ ಸುಖವನ್ನಿಯುವಂತಹ ಕಾಯ ಸುಖತೀರ್ಥರ ಕಾಯ ಅಂತ ಸ್ತೋತ್ರ ಮಾಡಿರುವದನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು.